ANANTHKUMAR PRATISHTHANA

# ಅನಂತಪಥ

ಪುಟ 9
ವ್ಯಕ್ತಿ ವಿಶೇಷ ಮಾಲಿಕೆ
ಸಾಮ್ರಾಟ್ ಮಿಹಿರ ಭೋಜ



ಸಂಪುಟ - 6 ಜನವರಿ- 2026 ಸಂಚಿಕೆ - 67

## ಅನ್ನದಾತನೊಂದಿಗೆ ಅನಂತ




ದೇಶಪ್ರೇಮ ಮತ್ತು ಜನಹಿತ ಅನಂತಕುಮಾರ್ ಅವರ ವ್ಯಕ್ತಿತ್ವದ ಎರಡು ಮುಖಗಳಾಗಿದ್ದವು. ಕೃಷಿಯನ್ನು ಭಾರತದ ಆತ್ಮವೆಂದು ನಂಬಿದ್ದ ಅವರಿಗೆ ಅನ್ನದಾತನ ಏಳಿಗೆಯೇ ಪ್ರಮುಖವಾಗಿತ್ತು. "ಕೃಷಿ ಕ್ಷೇತ್ರಕ್ಕೆ ನೀಡುವ ಅನುದಾನ ಖರ್ಚಲ್ಲ; ಅದು ದೇಶದ ಭವಿಷ್ಯದ ಮೇಲಿನ ಹೂಡಿಕೆ" ಎಂಬ ಅವರ ದೃಢ ನಿಲುವೇ ಎಲ್ಲ ಯೋಜನೆಗಳಿಗೂ ಪ್ರೇರಕ ಶಕ್ತಿಯಾಯಿತು. ಈ ಮಾತುಗಳು ಕೇವಲ ಘೋಷಣೆಯಾಗಿ ಉಳಿಯದೆ, ಅವರ ಆಡಳಿತದಲ್ಲಿ ನೀತಿ, ನಿರ್ಧಾರ ಮತ್ತು ಕಾರ್ಯರೂಪದಲ್ಲಿ ಸಾಕಾರಗೊಂಡವು.

ಅನಂತಕುಮಾರ್ ಅವರ ಪಾಲಿಗೆ ಕೃಷಿ ಎಂದರೆ ಬಜೆಟ್ ಅಂಕಿಅಂಶಗಳ ಲೆಕ್ಕಾಚಾರವಾಗಿರಲಿಲ್ಲ. ಅದು ರೈತನ ಶ್ರಮದ ಪ್ರತಿರೂಪವಾಗಿತ್ತು. ಸರ್ಕಾರಿ ಸವಲತ್ತುಗಳು ಕೇವಲ ಕಡತಗಳಿಗೆ ಸೀಮಿತವಾಗಬಾರದು; ಬದಲಿಗೆ ಪ್ರತಿಯೊಂದು ರೂಪಾಯಿಯೂ ರೈತನ ಕೈ ಸೇರಿ, ಆತನ ಬದುಕಿನಲ್ಲಿ ನೈಜ ಬದಲಾವಣೆ ತರಬೇಕು ಎಂಬುದು ಅವರ ಕೃಷಿ ನೀತಿಯ ಜೀವಾಳವಾಗಿತ್ತು.

### 2011: ಆಕ್ರೋಶ ಮತ್ತು ಪರಿಹಾರದ ಸಂಕಲ್ಪ

2005ರಿಂದ 2014ರವರೆಗೆ ರಸಗೊಬ್ಬರ ಕೊರತೆ ದೇಶದ ಕೃಷಿ ಕ್ಷೇತ್ರದಲ್ಲಿ ಮರುಕಳಿಸುವ ಸಂಕಟವಾಗಿ ಪರಿಣಮಿಸಿತ್ತು. ಪ್ರತಿ ಬಿತ್ತನೆ ಕಾಲದಲ್ಲೂ ರೈತರು ಗೊಬ್ಬರಕ್ಕಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರ ತೀವ್ರತೆ 2011ರ ಜೂನ್‌ನಲ್ಲಿ ಕರ್ನಾಟಕದ ಹಾವೇರಿ ಮತ್ತು ಗದಗ ಭಾಗಗಳಲ್ಲಿ ಬಹಿರಂಗವಾಗಿ ಕಂಡುಬಂದಿತು. ಗೊಬ್ಬರ ಇಲ್ಲದೆ ಬೆಳೆ ಹಾನಿಯಾಗುವ ಭೀತಿಯಲ್ಲಿ ರೈತರು ಬೀದಿಗಿಳಿದಾಗ, ಅನಂತಕುಮಾರ್ ಅವರು ಸಂಸತ್ತಿನಲ್ಲಿ ಮೌನ ವಹಿಸಲಿಲ್ಲ ಅವರು ಅನ್ನದಾತನ ಧ್ವನಿಯಾಗಿ ಗರ್ಜಿಸಿದರು.

**"ರೈತನಿಗೆ ಬೇಕಿರುವುದು ಬರಿ ಆಶ್ವಾಸನೆಗಳಲ್ಲ, ಅವನ ಹೊಲಕ್ಕೆ ತಲುಪಬೇಕಾದ ಗೊಬ್ಬರ. ಬಜೆಟ್‌ನ ಅಂಕಿ-ಅಂಶಗಳು ರೈತನ ಹೊಟ್ಟೆ ತುಂಬಿಸುವುದಿಲ್ಲ."** — ಹೀಗೆಂದು ಸಂಸತ್ತಿನಲ್ಲಿ ಗುಡುಗಿದ ಅನಂತಕುಮಾರ್ ಅವರ ಮಾತಿನಲ್ಲಿ ಕೇವಲ ಸಿಟ್ಟಿರಲಿಲ್ಲ, ಬದಲಾಗಿ, ಅವರು ಮುಂದೆ ತರಲಿದ್ದ ಕ್ರಾಂತಿಕಾರಿ ಕೃಷಿ ಸುಧಾರಣೆಗಳ ಮುನ್ನುಡಿಯಾಗಿದ್ದವು. ಅವರ ಈ ಆಕ್ರೋಶವೇ ಮುಂದೆ ರಸಗೊಬ್ಬರ ನೀತಿಯಲ್ಲಿ ಮಹತ್ತರ ಬದಲಾವಣೆ ತರಲು ಪ್ರೇರಣೆಯಾಯಿತು.

### ಯೂರಿಯಾ ದುರುಪಯೋಗಕ್ಕೆ 'ಕಹಿ' ಮದ್ದು

ಒಂದು ದಶಕದ ಹಿಂದೆ ಭಾರತದಲ್ಲಿ ಯೂರಿಯಾ ಕೇವಲ ರಸಗೊಬ್ಬರವಾಗಿರಲಿಲ್ಲ; ಅದು ಕಾಳಸಂತೆಕೋರರ ಪಾಲಿಗೆ ಚಿನ್ನದ ಮೊಟ್ಟೆಯಿಡುವ ಕೋಳಿಯಾಗಿತ್ತು. ಸರ್ಕಾರದ ಭಾರೀ ಸಹಾಯಧನದಿಂದ ಕಡಿಮೆ ಬೆಲೆಗೆ ಸಿಗುತ್ತಿದ್ದ ಕೃಷಿ ದರ್ಜೆಯ ಯೂರಿಯಾ, ರೈತನ ಹೊಲಕ್ಕೆ ತಲುಪುವ ಮೊದಲೇ ದಾರಿ ತಪ್ಪುತ್ತಿತ್ತು. ಪ್ಲೈವುಡ್ ಅಂಟು, ಕೈಗಾರಿಕಾ ಬಳಕೆ, ಹಾಲಿನ ಕಲಬೆರಕೆ ಹಾಗೂ ಕೃತಕ ಹಾಲು ಉತ್ಪಾದನೆ — ಇವುಗಳಿಗೆ ಯೂರಿಯಾ ದುರುಪಯೋಗವಾಗುತ್ತಿತ್ತು. ಪರಿಣಾಮವಾಗಿ ಸಾವಿರಾರು ಕೋಟಿ ರೂಪಾಯಿಗಳ ಸಬ್ಸಿಡಿ ಹಣ ರೈತರ ಬದಲಿಗೆ ಮಧ್ಯವರ್ತಿಗಳು ಮತ್ತು ಲಾಭಕೋರ ಉದ್ಯಮಿಗಳ ಕೈ ಸೇರುತ್ತಿತ್ತು.

ಪುಟ 4 ರಲ್ಲಿ ಮುಂದುವರಿದಿದೆ

## ಹೊಸ ವರ್ಷಕ್ಕೆ 'ಅದಮ್ಯ' ಸಂಕಲ್ಪ:
## ನಾಡು-ನುಡಿ ರಕ್ಷಣೆ ಹಾಗೂ ಪರಿಸರ ಸಂರಕ್ಷಣೆಯ ಸಂಕಲ್ಪ








ಅದಮ್ಯ ಚೇತನ ಮತ್ತು ಅನಂತಕುಮಾರ ಪ್ರತಿಷ್ಠಾನದ ವತಿಯಿಂದ ಲಾಲ್‌ಬಾಗ್ ರಸ್ತೆಯಲ್ಲಿರುವ ಅನಂತಸ್ಮೃತಿ ವನದಲ್ಲಿ ನಾಡು-ನುಡಿಗಾಗಿ ಸಂಕಲ್ಪ ಕಾರ್ಯಕ್ರಮ ಮತ್ತು ಸಾಮೂಹಿಕ ವಂದೇ ಮಾತರಂ ಗಾಯನ ಕಾರ್ಯಕ್ರಮ 2026ರ ಜನವರಿ 1 ರಂದು ಯಶಸ್ವಿಯಾಗಿ ನಡೆಯಿತು.

2000ನೇ ವರ್ಷದ ಪ್ರಾರಂಭದಲ್ಲಿ ಅನಂತಕುಮಾರ ಅವರಿಂದ ಪ್ರಾರಂಭವಾದ ಅಖಂಡ ವಂದೇಮಾತರಂ ಗಾಯನದ 25ನೇ ವರ್ಷ ಸಂದರ್ಭದಲ್ಲಿ ನಾಡು, ನುಡಿ, ನೆಲ, ಜಲದ ರಕ್ಷಣೆಯ ಹೊಣೆ ಹೊರುವ ಸಂಕಲ್ಪ ಮಾಡಲಾಯಿತು. ಅಂತೆಯೇ ನಿತ್ಯವೂ ಗೀತೆಯ ಕನಿಷ್ಠ 2 ಶ್ಲೋಕದ ಅರ್ಥಸಹಿತ ಪಠಣ ಮತ್ತು ಏಕ ಬಳಕೆ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ತ್ಯಜಿಸುವ ಸಂಕಲ್ಪ ಕೈಗೊಳ್ಳಲಾಯಿತು. ಅದಮ್ಯ ಚೇತನದ ಟ್ರಸ್ಟಿ ಶ್ರೀ ಪ್ರದೀಪ್ ಓಕ್ ಅವರು, ನೆರೆದಿದ್ದ ನೂರಾರು ಜನಸಮೂಹಕ್ಕೆ ಸಾಮೂಹಿಕ ಸಂಕಲ್ಪ ಮತ್ತು ವಯಕ್ತಿಕ ಸಂಕಲ್ಪ ಬೋಧಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅದಮ್ಯ ಚೇತನ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ ಅವರು, ಅದಮ್ಯ ಚೇತನವು 4 ಕೇಂದ್ರಗಳ ಮೂಲಕ ನಿತ್ಯ 1.60 ಲಕ್ಷ ಜನರಿಗೆ ನಿತ್ಯ ಬಿಸಿಯೂಟ ನೀಡುತ್ತಿದೆ. ತ್ಯಾಜ್ಯ ಮುಕ್ತ ಯೋಜನೆಯಲ್ಲಿ 35 ಪ್ಲೇಟ್ ಬ್ಯಾಂಕ್ ಕಾರ್ಯನಿರ್ವಹಿಸುತ್ತಿವೆ. ಇವುಗಳ ಸಂಖ್ಯೆ ಇನ್ನೆರೆಡು ತಿಂಗಳಲ್ಲಿ 50 ಆಗಲಿದೆ. ಸಾರ್ವಜನಿಕರು ಸಮಾರಂಭಗಳಿಗೆ ಉಚಿತವಾಗಿ ತಟ್ಟೆಲೋಟ ಪಡೆದು ಮರಳಿಸಬಹುದು ಎಂದರು.

ಪುಟ 8 ರಲ್ಲಿ ಮುಂದುವರಿದಿದೆ

ಚಿಣ್ಣರ ಚೇತನ
ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು
ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

# ವಿಜ್ಞಾನದ ಟಾಪ್ 100 ಪಟ್ಟಿಗೆ ನಂಜನಗೂಡು ಮಕ್ಕಳು



‘ಅಟಲ್ ಟಿಂಕರಿಂಗ್ ಲ್ಯಾಬ್’ ಎಂಬ ಹೆಸರನ್ನು ನೀವೆಲ್ಲ ಕೇಳಿರಬೇಕು. ಅನೇಕ ಶಾಲೆಗಳಲ್ಲಿ 6ನೇ ಕ್ಲಾಸ್‌ನಿಂದ ಹಿಡಿದು 12ನೇ ಕ್ಲಾಸ್‌ವರೆಗಿನ ಮಕ್ಕಳಿಗೆಂದು ಪುಟ್ಟ ಪ್ರಯೋಗಶಾಲೆಗಳಿರುತ್ತವೆ. ಅವಕ್ಕೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ಹೆಸರಿನಲ್ಲಿ ಎಟಿಎಲ್ ಎಂದು ಕರೆಯುತ್ತಾರೆ. ಅಲ್ಲಿ ನೀವು ಹೊಸ ಹೊಸ ಪ್ರಯೋಗ ಮಾಡಲು ಅವಕಾಶ ಇರುತ್ತವೆ. ವಿದ್ಯುತ್ ಸಲಕರಣೆ, ರಾಕೆಟ್ ಅಥವಾ ರೋಬಾಟ್‌ಗಳನ್ನು ತಯಾರಿಸುವ ಸಾಧನಗಳು, ಥ್ರೀಡೀ ಮುದ್ರಣ ವ್ಯವಸ್ಥೆ ಎಲ್ಲ ಇರುತ್ತವೆ.

ಅಲ್ಲಿ ‘ಟಿಂಕರಿಂಗ್’ ಅಂದರೆ ಚಿಕ್ಕಪುಟ್ಟ ಹೊಸ ಸಾಧನಗಳನ್ನು ತಯಾರಿಸಲು ಕಲಿತರೆ ಮುಂದೆ ನೀವು ಎಂಜಿನಿಯರ್ ಅಥವಾ ವಿಜ್ಞಾನಿ ಅಥವಾ ‘ಎಂಟರ್‌ಪ್ರೆನ್ಯೂರ್’ (ನವೋದ್ಯಮಿ) ಆಗಲು ಬೇಕಾದ ಪೂರ್ವ ಸಿದ್ಧತೆ ಇಲ್ಲಿಯೇ ನಡೆಯುತ್ತದೆ. ಶಾಲೆಯ ಟಿಂಕರ್ ಲ್ಯಾಬ್ ಗಳಲ್ಲಿ ಉತ್ತಮವಾದ ಏನನ್ನಾದರೂ ಸೃಷ್ಟಿ ಮಾಡಿದವರ ಅಂಥವರಿಗೆ ‘ಟಿಂಕರ್‌ಪ್ರೆನ್ಯೂರ್’ ಎನ್ನಬಹುದು. ಅವರಿಗೆ ಸರ್ಕಾರ ಪ್ರಶಸ್ತಿಯನ್ನೂ ನೀಡುತ್ತದೆ.

ಈ ವರ್ಷದ ರಾಷ್ಟ್ರಮಟ್ಟದ 100 ‘ಟಿಂಕರ್‌ಪ್ರೆನ್ಯೂರ್’ಗಳ ಪಟ್ಟಿಯಲ್ಲಿ ನಂಜನಗೂಡಿನ ಮೊರಾರ್ಜಿ ದೇಸಾಯಿ ಶಾಲೆಯ ಹೆಸರೂ ಸೇರಿದೆ. ಅಲ್ಲಿನ 8ನೇ ಕ್ಲಾಸಿನ ವಿದ್ಯಾರ್ಥಿ/ನಿಯರು ಸೇರಿ ಮನುಷ್ಯರ ಹೃದಯ ಬಡಿತವನ್ನು ಲೆಕ್ಕ ಮಾಡಬಲ್ಲ ಇಲೆಕ್ಟ್ರಾನಿಕ್ ಮಂಡಲವನ್ನು ರೂಪಿಸಿದ್ದಾರೆ. 9ನೇ ಕ್ಲಾಸಿನ ಮಕ್ಕಳು ಒಂದು ಪುಟ್ಟ ರೋಬಾಟನ್ನು ನಿರ್ಮಿಸಿದ್ದಾರೆ. ಅದರ ವಿಶೇಷ ಏನೆಂದರೆ ನೆಲದ ಮೇಲೆ ಗೋಲಿ, ಬುಗುರಿ, ಚಾಕ್‌ಪೀಸ್ ಇತ್ಯಾದಿ ಇಟ್ಟಿದ್ದರೆ ಅವನ್ನು ಗುರುತಿಸಿ, ಡಿಕ್ಕಿ ಹೊಡೆಯದೇ ಮುಂದಕ್ಕೆ ಸಾಗುತ್ತದೆ.

*ನಿಮ್ಮ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಂಥ ಏನೇ ಹೊಸ ವಿಚಾರವನ್ನೊ ಮುಂದಿಟ್ಟರೆ ಅಥವಾ ಹೊಸ ಸಾಧನವನ್ನು ರೂಪಿಸಿದರೆ ನೀವು ನಮಗೆ ಚಿತ್ರ ಸಮೇತ ವರದಿಯನ್ನು ಕಳುಹಿಸಬಹುದು.*

ಅನಂತಯಾನ
ನಿರೂಪಣೆ : ಟಿ.ಎಸ್. ಗೋಪಾಲ್

# ಕಾರ್ಯಕರ್ತನ ಮನೆಯ ಬಾಗಿಲಿಗೆ


ಆಗಿನ ಕಾಲದಲ್ಲಿ ಹಣದ ಕೊರತೆ ತೀರಾ ಸಾಮಾನ್ಯ. ಆದರೆ ಅದು ಸಮಸ್ಯೆಯೆಂದೇ ತೋರುತ್ತಿರಲಿಲ್ಲ. ಸಮಸ್ಯೆಯೆಂದರೂ ಏನೂ ಮಾಡುವಂತಿರಲಿಲ್ಲ, ಅದು ಬೇರೆಯ ವಿಷಯ. ಸಂಘಟನೆಯ ಕೆಲಸ ಎಂದರೆ ಮಾಡಲೇಬೇಕಾದ ಕೆಲಸ ಅಷ್ಟೇ, ಅದರ ಖರ್ಚುವೆಚ್ಚಗಳಿಗೆ ಏನು ಮಾಡುವುದು, ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬಂದದ್ದಾಯಿತು, ವಾಪಸ್ ಹೋಗಲಿಕ್ಕೆ ಹಣವನ್ನು ಹೊಂದಿಸುವುದು ಹೇಗೆ ಎಂಬ ಪ್ರಶ್ನೆಗಳಿಗೆ ಅವಕಾಶವಿಲ್ಲದಂತೆ ಅವರಿವರು ಸೇರಿ ವೆಚ್ಚವನ್ನು ಸರಿದೂಗಿಸಿಕೊಂಡು ಹೋಗುತ್ತಿದ್ದರು. ಅಂತೆಯೇ ಹಣಕಾಸಿನ ಕೊರತೆಯೆನ್ನುವುದು ಅನಂತಕುಮಾರರಿಗೆ ಎಂದೂ ಸಮಸ್ಯೆಯೆಂದೇ ತೋರಿರಲಿಲ್ಲ. ಅವರಲ್ಲಿ ಇದ್ದುದು ಕರ್ತವ್ಯನಿಷ್ಠೆ, ಕೆಲಸವನ್ನು ಮಾಡಿ ಮುಗಿಸುವ ಬದ್ಧತೆ ಅಷ್ಟೇ. ಪ್ರಯಾಣ ಮಾಡಬೇಕು ಅಂದರೆ ಹೋಗಿ ತಲುಪುವುದಷ್ಟೇ ಮುಖ್ಯ. ಬಸ್ಸಾದರೂ ಸರಿಯೇ, ಲಾರಿಯಾದರೂ ಸರಿಯೇ; ನಡೆದುಹೋಗುವುದಕ್ಕೂ ಸಿದ್ಧವೇ. ಸೌಖ್ಯ, ಸುಲಲಿತವ್ಯವಸ್ಥೆಗಳೆಲ್ಲ ತಮ್ಮ ಪಯಣದ ಭಾಗವಾಗಿರಲೇಬೇಕೆಂಬ ನಿರೀಕ್ಷೆ ಅವರ ಮನೋಭಾವದಲ್ಲಿ ಇರಲೇ ಇಲ್ಲ.

ಅಸ್ಸಾಂ ಆಂದೋಲನದಲ್ಲಿ ಭಾಗವಹಿಸಲು ಹೋದಾಗಲೂ ಅಷ್ಟೇ. ಕೋಲ್ಕೊತಾದಿಂದ ಗೌಹಾಟಿಗೆ ಹೊರಟ ರೈಲಿನಲ್ಲಿ ಅನಂತಕುಮಾರರ ನಾಯಕತ್ವದ ಗುಂಪು ಇದ್ದಿತು. ರೈಲು ಪ್ರಯಾಣಿಕರಿಂದ ಕಿಕ್ಕಿರಿದು ತುಂಬಿತ್ತು. ಕಾಲಿಡಲೂ ಜಾಗವಿಲ್ಲದ ಪರಿಸ್ಥಿತಿ. ಪರಿಷತ್ತಿನ ಗೆಳೆಯರು ಬೋಗಿಯಲ್ಲಿ ಪ್ರಯಾಣಿಕರು ಸಾಮಾನುಗಳನ್ನಿರಿಸುವ ಮೇಲುಖಾನೆಗಳಲ್ಲಿ ಒಂದೊಂದರಲ್ಲಿ ಐದಾರು ಜನರಂತೆ ಇಕ್ಕಟ್ಟಿನಲ್ಲಿ ಕುಳಿತು ಪಯಣಿಸಿದ್ದೇ ಒಂದು ಕಥೆ.

ಅಸ್ಸಾಂ ಆಂದೋಲನ ವಿಪರೀತಕ್ಕೆ ತಿರುಗಿ ಲಾಠೀಚಾರ್ಜ್, ಗೋಲೀಬಾರ್ ಎಲ್ಲವೂ ಸಂಭವಿಸಿ ಗೊಂದಲವಾಯಿತು. ಅನಂತಕುಮಾರರ ನೇತೃತ್ವದ ವಿದ್ಯಾರ್ಥಿಗಳ ಗುಂಪನ್ನು ಬಂಧಿಸಿದ ಪೋಲೀಸರು ಎಲ್ಲಿಯೋ ದೂರದ ಹಳ್ಳಿಗೆ ಅವರನ್ನೆಲ್ಲ ಕರೆದೊಯ್ದು ಬಿಟ್ಟು ಹೋದರು. ಎಲ್ಲಿದ್ದೇವೆ, ಎಲ್ಲಿಗೆ ಹೋಗಬೇಕು ಏನೂ ಗೊತ್ತಾಗದ ಅಪರಿಚಿತ ಪ್ರದೇಶ. ಅಲ್ಲಲ್ಲಿ ಜನ ಕಂಡರೂ ಅವರ ಭಾಷೆ ಇವರಿಗಾಗಲಿ ಇವರ ಭಾಷೆ ಅವರಿಗಾಗಲಿ ತಿಳಿಯುವಂತಿಲ್ಲ. ನಿಸ್ಸಹಾಯಕರಾಗಿದ್ದ ತಮ್ಮ ಜೊತೆಗಾರರಿಗೆ ಅನಂತಕುಮಾರ್ ಸೂಚಿಸಿದ ಪರಿಹಾರವಿಷ್ಟೇ: " ಮುಖ್ಯ ರಸ್ತೆ ಎಲ್ಲಿದೆ ಹುಡುಕುತ್ತ ನಡೆಯೋಣ . ಅಲ್ಲಿಂದ ಯಾವುದಾದರೂ ಪಟ್ಟಣಕ್ಕೆ ಸೇರಬಹುದು". ಅದೇ ಸೂಚನೆಯನ್ನನುಸರಿಸಿ ಹೊರಟ ವಿದ್ಯಾರ್ಥಿಗಳಿಗೆ ಮುಖ್ಯರಸ್ತೆಯೂ ಕಾಣಸಿಕ್ಕಿತು; ಅತ್ತ ಬಂದ ಟ್ರಕ್ಕೊಂದನ್ನು ಏರಿ ಮುಂದಿನ ಪಟ್ಟಣವನ್ನು ತಲುಪುವುದಕ್ಕೂ ಸಾಧ್ಯವಾಯಿತು. ಎಂಥ ಪರಿಸ್ಥಿತಿಯಲ್ಲೂ ಮನಸ್ಥೈರ್ಯವನ್ನು ಕಳೆದುಕೊಳ್ಳದ, ಯಾವುದೇ ಸಮಸ್ಯೆಗೆ ಸೂಕ್ತ ಪರಿಹಾರವೊಂದನ್ನು ಅನ್ವೇಷಿಸಬಲ್ಲ ವ್ಯಕ್ತಿತ್ವ ಅವರದ್ದಾಗಿತ್ತು ಎನ್ನುವುದಕ್ಕೆ ಇದೊಂದು ಉದಾಹರಣೆ. ತಾವು ಸಾಹಸಶೀಲರಾಗಿರುವುದಲ್ಲದೆ, ಉಳಿದವರಲ್ಲೂ ಸಾಹಸದ ಪ್ರವೃತ್ತಿಯನ್ನು ಬೆಳೆಸುವ ಪ್ರೇರಕಶಕ್ತಿ ಅವರಲ್ಲಿತ್ತು.

ಅನಂತಕುಮಾರರ ಕಾರ್ಯಸಾಮರ್ಥ್ಯವನ್ನು ನೋಡಿಯೇ ತಿಳಿಯಬೇಕು. ಅದು ಯಾವುದೋ ಅಭ್ಯಾಸವರ್ಗದ ಕಾರ್ಯಕ್ರಮವಿರಲಿ, ರಾಷ್ಟ್ರೀಯ ಸಮ್ಮೇಳನವೇ ಇರಲಿ. ಕಾರ್ಯಕ್ರಮದ ಪ್ರತಿಯೊಂದು ರೂಪರೇಶೆಯೂ ಸಿದ್ಧವಾಗತಕ್ಕದ್ದು. ಸಭೆನಡೆಯಬೇಕಾದ್ದು ಎಲ್ಲಿ, ಯಾರು ಮುಖ್ಯ ಅತಿಥಿಗಳು, ಅವರ ಪ್ರಯಾಣವ್ಯವಸ್ಥೆ ಹೇಗೆ, ಅವರನ್ನು ಕರೆದುಕೊಂಡು ಬರುವವರು ಯಾರು, ನೆರವಿಗೆ ನಿಲ್ಲುವವರು ಯಾರು, ಧ್ವನಿವರ್ಧಕ ಎಲ್ಲಿಂದ, ಅದರ ವ್ಯವಸ್ಥೆ ವಹಿಸಬೇಕಾದವರು ಯಾರು, ಸಭಿಕವಿದ್ಯಾರ್ಥಿಗಳು ಯಾರು, ಅವರು ಎಲ್ಲಿಂದ ಬರಬೇಕು-ಇವೆಲ್ಲ ವಿವರಗಳು ಒಂದೂ ಬಿಡದಂತೆ ಅವರ ಅವಗಾಹನೆಗೆ ಬಂದು ನಿಶ್ಚಯವಾಗಿಬಿಡಬೇಕು. ಸಭೆಯಲ್ಲಿ ಮಂಡಿಸಬೇಕಾದ ನಿರ್ಣಯಗಳನ್ನೂ ಅವರೇ ಬರೆಯತೊಡಗುವರು


ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲಿ **ವಿದ್ಯಾರ್ಥಿಪಥ** ಎಂಬ ಪತ್ರಿಕೆಯ ಪ್ರಕಟಣೆಯೂ ಸೇರಿತ್ತು. ಈ ಪತ್ರಿಕೆಗಾಗಿ ಅನಂತಕುಮಾರ್ ಬರೆಯುತ್ತಿದ್ದ ಚುಟುಕಗಳು ಬಹು ಜನಪ್ರಿಯವಾಗಿದ್ದವು.




ಒಂದು ಕಾಲಕ್ಕೆ ಈ ಪತ್ರಿಕೆಯನ್ನು ಸ್ಟೆನ್ಸಿಲ್ ಕಾಗದದಲ್ಲಿ ಬರೆದು ಬಿಳಿಹಾಳೆಗಳ ಮೇಲೆ ಛಾಪುಮೂಡಿಸಲು ರೋಲರ್ ಬಳಸಿ ಒತ್ತಬೇಕಾಗಿತ್ತು. ಲೇಖನಚುಟುಕಗಳನ್ನು ಬರೆಯುವುದರ ಜೊತೆಗೆ ಈ ಕಲ್ಲಚ್ಚಿನ ಕೆಲಸಕ್ಕೂ ಅನಂತಕುಮಾರರು ಸಜ್ಜಾಗಿ ನಿಲ್ಲುತ್ತಿದ್ದರು.

ಆಗ ರಾಜ್ಯದ ಶೈಕ್ಷಣಿಕ ಸ್ಥಿತಿಗತಿಗಳು ಹದಗೆಟ್ಟಿದ್ದವು. ಇದರ ಅವ್ಯವಸ್ಥೆಯ ಕಡೆಗೆ ವಿದ್ಯಾರ್ಥಿಗಳಿಂದ ಮೊದಲುಗೊಂಡು ಸರ್ಕಾರದವರೆಗೆ ಎಲ್ಲರ ಗಮನ ಸೆಳೆಯುವ ಸಲುವಾಗಿ ಕರಾಳಪತ್ರ ಎಂಬ ಸಂಚಿಕೆಯನ್ನು ಹೊರಡಿಸುತ್ತಿದ್ದರು. ಈ ಪತ್ರದ ಒಕ್ಕಣೆಯನ್ನು ಹೇಳಿ ಬರೆಸುವವರು ಅನಂತಕುಮಾರರೇ. ಬರೆದುಕೊಳ್ಳುವ ಲಿಪಿಕಾರ ಬೇಳೂರು ಸುದರ್ಶನ. ವಿಶ್ವೇಶ್ವರ ಹೆಗಡೆ ಇದಕ್ಕೆ "ಸಾಕ್ಷೀಭೂತ". ಎಲ್ಲಿಯೋ ಪದವನ್ನೋ ವಾಕ್ಯವನ್ನೋ ಸರಿಮಾಡಲು ಒಗ್ಗರಣೆ ಹಾಕುವ ಕೆಲಸವಷ್ಟೇ ಹೆಗಡೆಯವರದು.

ಅನಂತಕುಮಾರ ಗಮನಿಸುತ್ತಿದ್ದ ರೀತಿಯ ಪ್ರಕಾರ, ಬರೆವಣಿಗೆಯ ಸಾಹಿತ್ಯ ಸಮತೂಕವಾಗಿರತಕ್ಕದ್ದು. ಎಲ್ಲಿ ಯಾವ ಪದ ಬಳಸಬೇಕು ಎಂಬ ಎಚ್ಚರ ಅವರಲ್ಲಿತ್ತು. ಪದಪ್ರಯೋಗ ಎಲ್ಲಿ ಸೌಮ್ಯವಾಗಿರಬೇಕು, ಎಲ್ಲಿ ವಿಡಂಬಿಸುವಂತಿರಬೇಕು, ಎಲ್ಲಿ ಉಗ್ರವಾಗಿರತಕ್ಕದ್ದು ಎಂಬುದನ್ನೆಲ್ಲ ಅವರು ಗಮನಿಸುವವರೇ. ಒಕ್ಕಣೆ ಪತ್ರಿಕೆಯದ್ದಿರಲಿ, ಕರಪತ್ರದ್ದಾಗಿರಲಿ, ಗೋಡೆಗೆ ಅಂಟಿಸುವ ಪೋಸ್ಟರ್ ಇರಲಿ, ಎಲ್ಲದರ ಬರೆಹದ ಹಿನ್ನೆಲೆಯಲ್ಲಿ ಅನಂತಕುಮಾರರ ಪ್ರೇರಣೆ ಇದ್ದೇ ಇರುತ್ತಿತ್ತು.



ಪುಟ 5 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ಅನ್ನದಾತನೊಂದಿಗೆ ಅನಂತ

ಈ ವ್ಯವಸ್ಥಿತ ಸೋರಿಕೆಗೆ ಬ್ರೇಕ್ ಹಾಕಲು ಅನಂತಕುಮಾರ್ ಅವರು ಕಂಡುಕೊಂಡ ದಿವ್ಯೌಷಧವೇ 'ಬೇವು ಲೇಪಿತ ಯೂರಿಯಾ'. 2014 ರಲ್ಲಿ ಅಧಿಕಾರ ವಹಿಸಿಕೊಂಡ ಅನಂತಕುಮಾರ್ ಅವರು ಈ ಪ್ರಮಾಣವನ್ನು ಶೇ. 75 ಕ್ಕೆ ಏರಿಸಿದ್ದಲ್ಲದೆ ಅದನ್ನು ಕಡ್ಡಾಯ ಮಾಡಿದರು. ಅಧಿಕಾರಕ್ಕೇರಿದ ಅಲ್ಪಕಾಲದಲ್ಲಿಯೇ ಅವರು ಹೊಸ ರಾಷ್ಟ್ರೀಯ ಯೂರಿಯಾ ಪಾಲಿಸಿಯನ್ನು ದಿನಾಂಕ 25/05/2015 ರಿಂದ ಜಾರಿಗೆ ತಂದರು. ಅದರಂತೆ 01/09/2015 ರಿಂದ ದೇಶದಲ್ಲಿ ಸಂಪೂರ್ಣವಾಗಿ ಬೇವುಲೇಪಿತ ಯೂರಿಯಾ ಉತ್ಪಾದನೆಯನ್ನು ಕಡ್ಡಾಯಗೊಳಿಸಲಾಯಿತು. ಇಂದು ದೇಶದಲ್ಲಿ ಉತ್ಪಾದನೆಯಾಗುವ ಶೇ. 100 ರಷ್ಟು ರಸಗೊಬ್ಬರ ದರ್ಜೆಯ ಯೂರಿಯಾ ಬೇವುಲೇಪಿತವೇ ಆಗಿವೆ. ಈ ಕ್ರಮ ಯೂರಿಯಾದ ರಾಸಾಯನಿಕ ಗುಣವನ್ನೇ ಬದಲಿಸಿತು. ಬೇವಿನ ಕಹಿ ಅಂಶದಿಂದಾಗಿ ಯೂರಿಯಾವನ್ನು ಹಾಲಿನ ಕಲಬೆರಕೆಗಾಗಲಿ, ಕೈಗಾರಿಕಾ ಉದ್ದೇಶಗಳಿಗಾಗಲಿ ಬಳಸುವುದು ಅಸಾಧ್ಯವಾಯಿತು. ಇದರ ಹಲವಾರು ಪ್ರಯೋಜನಗಳು ಕಂಡು ಬಂದಿವೆ. ಮಣ್ಣಿನಲ್ಲಿ ಸೇರಿದ ಬೇವು ಲೇಪಿತ ಯುರಿಯಾ ಕೀಟ ನಾಶಕದಂತೆ ವರ್ತಿಸಿ, ಮಣ್ಣಿನ ಗುಣಮಟ್ಟ ಸುಧಾರಣೆಯಲ್ಲಿ ಸಹಕಾರಿಯಾಯಿತು.

**'ಲ್ಯಾಬ್ ಟು ಲ್ಯಾಂಡ್'ಯೋಜನೆ:**

ಅನಂತಕುಮಾರ್ ಅವರು ಕೇವಲ ರಸಗೊಬ್ಬರ ವಿತರಣೆಯಲ್ಲಿಯೇ ತಮ್ಮ ಪಾತ್ರವನ್ನು ಸೀಮಿತಗೊಳಿಸಿಕೊಳ್ಳಲಿಲ್ಲ. ವಿಜ್ಞಾನ ಮತ್ತು ಕೃಷಿಯ ನಡುವಿನ ಅಂತರವನ್ನು ಕಡಿಮೆ ಮಾಡಬೇಕು ಎಂಬ ದೃಷ್ಟಿಕೋನ ಅವರದ್ದಾಗಿತ್ತು. ಪ್ರಯೋಗಾಲಯಗಳಲ್ಲಿ ಹುಟ್ಟುವ ಸಂಶೋಧನೆಗಳು ಕೇವಲ ವರದಿಗಳಲ್ಲೇ ಉಳಿಯದೇ, ರೈತನ ಹೊಲಕ್ಕೆ ತಲುಪಬೇಕು (Lab to Land) ಎಂಬ ನಿಲುವನ್ನು ಅವರು ಸದಾ ಒತ್ತಿ ಹೇಳುತ್ತಿದ್ದರು. ಇದೇ ಅವಧಿಯಲ್ಲಿ ಕೇಂದ್ರ ಸರ್ಕಾರವು ಕೃಷಿ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಕೆಗೆ ಒತ್ತು ನೀಡಿದ್ದು, ಕಿಸಾನ್ ಸುವಿಧಾ ಮುಂತಾದ ಮೊಬೈಲ್ ಆ್ಯಪ್‌ಗಳ ಮೂಲಕ ಹವಾಮಾನ ಮಾಹಿತಿ, ಮಾರುಕಟ್ಟೆ ದರಗಳು, ರಸಗೊಬ್ಬರ ಮತ್ತು ಇತರೆ ಕೃಷಿ ಇನ್‌ಪುಟ್‌ಗಳ ಲಭ್ಯತೆಯ ವಿವರಗಳು ರೈತನ ಕೈಬೆರಳ ತುದಿಗೆ ತಲುಪುವಂತಾಯಿತು. ಜೊತೆಗೆ ಕೃಷಿ ವಿಜ್ಞಾನ ಕೇಂದ್ರಗಳ (KVKs) ಬಲವರ್ಧನೆಯ ಮೂಲಕ ವಿಜ್ಞಾನಾಧಾರಿತ ಕೃಷಿ ತಿಳುವಳಿಕೆ ಗ್ರಾಮೀಣ ಮಟ್ಟಕ್ಕೆ ಹರಡುವ ವಾತಾವರಣ ನಿರ್ಮಾಣವಾಯಿತು. ಈ ಸಮಗ್ರ ಪ್ರಯತ್ನಗಳು ರೈತನ ನಿರ್ಧಾರಶಕ್ತಿಯನ್ನು ಬಲಪಡಿಸಿ, ಆಧುನಿಕ ಕೃಷಿಯತ್ತ ದೇಶವನ್ನು ಮುನ್ನಡೆಸುವಲ್ಲಿ ಮಹತ್ವದ ಪಾತ್ರ ವಹಿಸಿವೆ.

**ಸಬ್ಸಿಡಿಯ ನೇರ ಲಾಭ:** ಮಧ್ಯವರ್ತಿಗಳ ಹಾವಳಿಗೆ ಮುಕ್ತಿ
ರೈತರಿಗೆ ನೀಡಲಾಗುತ್ತಿದ್ದ ರಸಗೊಬ್ಬರ ಸಬ್ಸಿಡಿಯ ದೊಡ್ಡ ಭಾಗವು ಮಧ್ಯವರ್ತಿಗಳು ಹಾಗೂ ಕಾಳಸಂತೆಗಾರರ ಪಾಲಾಗುತ್ತಿರುವುದನ್ನು ಗಂಭೀರವಾಗಿ ಗಮನಿಸಿದ ಅನಂತಕುಮಾರ್ ಅವರು, ರಸಗೊಬ್ಬರ ವಲಯದಲ್ಲಿ Direct Benefit Transfer (DBT) ವ್ಯವಸ್ಥೆಯನ್ನು ಜಾರಿಗೆ ತರಲು ದೃಢ ಸಂಕಲ್ಪ ತೋರಿದರು. Point of Sale (PoS) ಯಂತ್ರಗಳ ಮೂಲಕ ರಸಗೊಬ್ಬರ ವಿತರಣೆಯನ್ನು ಪಾರದರ್ಶಕಗೊಳಿಸಿದ ಈ ಕ್ರಮದಿಂದ, ಸರ್ಕಾರದ ಸಬ್ಸಿಡಿ ಅರ್ಹ ರೈತನಿಗೆ ಮಾತ್ರ ತಲುಪುವ ವ್ಯವಸ್ಥೆ ಬಲವಂತಗೊಂಡಿತು. ಇದರಿಂದ ದುರ್ಬಳಕೆ, ಕೃತಕ ಬೇಡಿಕೆ ಮತ್ತು ಕಾಳಸಂತೆಗೆ ತೀವ್ರ ಕಡಿವಾಣ ಬಿದ್ದಿತು."ಸರ್ಕಾರ ನೀಡುವ ಪ್ರತಿ ರೂಪಾಯಿಯೂ ನೇರವಾಗಿ ಫಲಾನುಭವಿಯ ಜೇಬಿಗೆ ಸೇರಬೇಕು" ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಆಶಯಕ್ಕೆ, ಅನಂತಕುಮಾರ್ ಅವರು ರಸಗೊಬ್ಬರ ಇಲಾಖೆಯ ಮೂಲಕ ದೃಢ ಹಾಗೂ ಶಾಶ್ವತ ತಳಹದಿ ಹಾಕಿಕೊಟ್ಟರು. ಈ ಸುಧಾರಣೆ ದೇಶದ ಕೃಷಿ ಸಬ್ಸಿಡಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸವನ್ನು ಮರುಸ್ಥಾಪಿಸಿದ ಮಹತ್ವದ ಹೆಜ್ಜೆಯಾಗಿ ಪರಿಗಣಿಸಲ್ಪಟ್ಟಿದೆ.




**ಮಣ್ಣಿನ ಆರೋಗ್ಯವೇ ದೇಶದ ಆರೋಗ್ಯ (Soil Health Card)**

ಅನಂತಕುಮಾರ್ ಅವರು ಕೃಷಿ ಉತ್ಪಾದಕತೆ ಮತ್ತು ಪರಿಸರ ಸಂರಕ್ಷಣೆ ಎರಡೂ ಪರಸ್ಪರ ಪೂರಕವಾಗಿರಬೇಕು ಎಂದು ದೃಢವಾಗಿ ನಂಬಿದ್ದರು. ರಾಸಾಯನಿಕ ಗೊಬ್ಬರಗಳ ಅತಿಯಾದ ಹಾಗೂ ಅವೈಜ್ಞಾನಿಕ ಬಳಕೆಯಿಂದ ಮಣ್ಣಿನ ಸಾರ ಕ್ಷೀಣಿಸುತ್ತಿರುವುದನ್ನು ಅವರು ಗಂಭೀರವಾಗಿ ಪರಿಗಣಿಸಿದ್ದರು. ಈ ಸಮಸ್ಯೆಗೆ ಪರಿಹಾರವಾಗಿ, ಕೇಂದ್ರ ಸರ್ಕಾರದ 'ಮಣ್ಣಿನ ಆರೋಗ್ಯ ಕಾರ್ಡ್' (Soil Health Card) ಯೋಜನೆಯನ್ನು ತಮ್ಮ ಅವಧಿಯಲ್ಲಿ ಒಂದು ಆಂದೋಲನದಂತೆ ಜಾರಿಗೊಳಿಸಿದರು. ಮಣ್ಣಿನ ಗುಣಧರ್ಮ ಮತ್ತು ಪೋಷಕಾಂಶಗಳ ಕೊರತೆಯನ್ನು ಆಧರಿಸಿ, ಅಗತ್ಯವಿರುವಷ್ಟೇ ಗೊಬ್ಬರವನ್ನು ಬಳಸುವ ವೈಜ್ಞಾನಿಕ ಅರಿವನ್ನು ಅವರು ರೈತರಲ್ಲಿ ಮೂಡಿಸಿದರು.ಇದರಿಂದ ರೈತರಿಗೆ ಅನಗತ್ಯ ವೆಚ್ಚ ಕಡಿಮೆಯಾದದ್ದಷ್ಟೇ ಅಲ್ಲ, ಮಣ್ಣಿನ ದೀರ್ಘಕಾಲೀನ ಆರೋಗ್ಯವನ್ನು ಕಾಪಾಡುವ ದಿಕ್ಕಿನಲ್ಲಿ ದೇಶದ ಕೃಷಿ ನೀತಿ ಸಾಗುವಂತಾಯಿತು. "ಮಣ್ಣಿನ ಆರೋಗ್ಯ ಉಳಿದರೆ ಮಾತ್ರ ರೈತನೂ, ದೇಶವೂ ಆರೋಗ್ಯವಾಗಿರುತ್ತದೆ" ಎಂಬ ಆಲೋಚನೆ ಈ ಯೋಜನೆಯ ಮೂಲಕ ಭೂಮಿಯ ಮಟ್ಟದಲ್ಲಿ ಅನುಷ್ಠಾನಕ್ಕೆ ಬಂದಿತು.

ಅಧಿಕಾರಕ್ಕಿಂತ ಜನರ ಸೇವೆಯೇ ದೊಡ್ಡದು ಎಂದು ನಂಬಿದ್ದವರು ಅನಂತಕುಮಾರ್. ರೈತರ ಮತ್ತು ಶೋಷಿತ ವರ್ಗದ ಪರವಾಗಿ ಅವರು ರೂಪಿಸಿದ ಕ್ರಾಂತಿಕಾರಿ ನೀತಿಗಳು ಇಂದಿಗೂ ಅಜರಾಮರ. ಕೃಷಿ ಕ್ಷೇತ್ರಕ್ಕೆ ಅವರು ನೀಡಿದ ಹೊಸ ಆಯಾಮ ಮತ್ತು ಅಂದು ಅವರು ಕೈಗೊಂಡ ದೃಢ ನಿರ್ಧಾರಗಳು ಮತ್ತು ರೂಪಿಸಿದ ಯೋಜನೆಗಳು ಇಂದು ಕೃಷಿ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಯ ಫಸಲನ್ನು ನೀಡುತ್ತಿವೆ. ಅವರ ಈ ದೂರದೃಷ್ಟಿಯ ಕ್ರಮಗಳು ಕೃಷಿ ಕ್ಷೇತ್ರದ ಇತಿಹಾಸದಲ್ಲಿ ಮೈಲಿಗಲ್ಲಾಗಿವೆ. ಅವರು ಹಾಕಿಕೊಟ್ಟ ದಾರಿ ಮತ್ತು ಅವರ ರೈತಪರ ಆದರ್ಶಗಳು ಮುಂದಿನ ಪೀಳಿಗೆಗೂ ದಾರಿದೀಪವಾಗಿವೆ.



# ಅದಮ್ಯ ಚೇತನ - ಅನಂತಕುಮಾರ್

ನಾನು ಕಂಡಂತೆ



ಅನಂತಕುಮಾರ್

**-ಜಿ.ನಾರಾಯಣ ಪ್ರಸಾದ್**
**ಮಾಜಿ ಜಿಲ್ಲಾಧ್ಯಕ್ಷರು.**
**ಭಾರತೀಯ ಜನತಾ ಪಾರ್ಟಿ**
**ಚಾಮರಾಜನಗರ**

ತೊಂಬತ್ತರ ದಶಕದ ಪ್ರಾರಂಭದಲ್ಲಿ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕ್ರಮವೊಂದರಲ್ಲಿ ನಾನು ಭಾಗವಹಿಸಿದ್ದಾಗ ವೇದಿಕೆಯಲ್ಲಿ ಅನಂತಕುಮಾರ್ ಅವರು ಮಾಡಿದ ಭಾಷಣ ಕೇಳಿ ಪ್ರಭಾವಿತನಾಗಿ, ಪರಿಷತ್ತು ಹಾಗೂ ಸಂಘ ಪರಿವಾರದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ನಿರ್ಧಾರ ಮಾಡಿದೆ. ಚಾಮರಾಜನಗರದಲ್ಲಿ ಉದ್ಯಮ ಪ್ರಾರಂಭಿಸಿದ ನಂತರ ಬಿಜೆಪಿ ಸದಸ್ಯನಾಗಿ ಮುಂದುವರಿದೆ. ಆಗ ಅನಂತಕುಮಾರ್ ರವರು ರಾಷ್ಟ್ರೀಯ ಕಾರ್ಯದರ್ಶಿ ಆಗಿದ್ದರು. ಅಯೋಧ್ಯಾ ರಥಯಾತ್ರೆ, ಹುಬ್ಬಳ್ಳಿ ಧ್ವಜ ಹೋರಾಟಗಳಲ್ಲಿ ಸಕ್ರಿಯವಾಗಿದ್ದೆನಾದರೂ ನಾನು ನೇರವಾಗಿ ಬಿಜೆಪಿ ಜಿಲ್ಲಾ ಖಜಾಂಚಿ,ಕಾರ್ಯದರ್ಶಿಯಾಗಿ ಕೆಲಸ ಮಾಡಲು ಅನಂತಕುಮಾರರು ರಾಜ್ಯ ಅಧ್ಯಕ್ಷರಾದದ್ದೆ ನನಗೆ ಒಂದು ರೀತಿಯಲ್ಲಿ ಸ್ಫೂರ್ತಿ ಎಂದರದು ಅತಿಶಯವಲ್ಲ.

2008ರ ವಿಧಾನಸಭಾ ಚುನಾವಣೆಯಲ್ಲಿ ಸನ್ಮಾನ್ಯ ಅಡ್ವಾಣಿಜೀ ಅವರ ಸಾರ್ವಜನಿಕ ಕಾರ್ಯಕ್ರಮ. ನಗರದ ಮಾರಿಗುಡಿಯ ಮುಂದೆ ನೆರೆದ ಭಾರಿ ಜನಸ್ತೋಮದ ನಿರ್ವಹಣೆಯ ಜವಾಬ್ದಾರಿ ನನ್ನದಾಗಿತ್ತು. ಕಾರ್ಯಕ್ರಮದ ನಂತರ ಮಯೂರ ಸ್ಟೋರ್ಸ್ ಸುಬ್ರಹ್ಮಣ್ಯ ಅವರ ಮನೆಯಲ್ಲಿ ನಡೆದ ಚಹಾ ಕೂಟದಲ್ಲಿ ಅನಂತಕುಮಾರ್ ಅವರು ಆತ್ಮೀಯವಾಗಿ ಮಾತನಾಡಿಸಿ, ಅಡ್ವಾಣಿಯವರಿಗೆ ಪರಿಚಯ ಮಾಡಿಸಿ, ಅಂದಿನ ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಿಸಿದವರ ಬೆನ್ನು ತಟ್ಟಿದ ರೀತಿ ಮರೆಯಲಾಗದು.

2008ರ ಆಗಸ್ಟ್ 13 ರಂದು 16 ಕೋಟಿ ರೂಪಾಯಿ ವೆಚ್ಚದಲ್ಲಿ ಚಾಮರಾಜನಗರ ಜಿಲ್ಲೆಯ ಮಾದಾಪುರದಲ್ಲಿ ಕೇಂದ್ರೀಯ ವಿದ್ಯಾಲಯ ಪ್ರಾರಂಭಿಸಿದ ಅನಂತಕುಮಾರ್‌ಜೀ ಅವರನ್ನು ಕಾಂಗ್ರೆಸ್ ಸಂಸದರಾಗಿದ್ದ ಧ್ರುವನಾರಾಯಣ್ ಶ್ಲಾಘಿಸಿ, ಈ ಯೋಜನೆಯ ಯಶಸ್ಸು ಸಂಸದೀಯ ಮಂತ್ರಿಗಳಾದ ಅನಂತಕುಮಾರ್ ಅವರಿಗೆ ಸಲ್ಲಬೇಕೆಂದು ಪ್ರಶಂಸಿದರೆಂದರೆ, ಪಕ್ಷ ರಾಜಕಾರಣದಿಂದ ಮೇಲೇರಿದ್ದ ಅವರ ಕರ್ತೃತ್ವ ಶಕ್ತಿಯ ಪರಿಚಯವಾಗಿ, ನಮ್ಮ ಜಿಲ್ಲೆಯಲ್ಲಿ ಸಂಘಟನೆಗೆ ಬಲ ತುಂಬಿದ್ದಂತು ದಿಟ.

ನಂತರ ನಡೆದ ಅಲ್ಲಿನ ಮಕ್ಕಳೊಂದಿಗಿನ ಸಂವಾದದಲ್ಲಿ ಮಕ್ಕಳಾಗಿ ಸರಳವಾಗಿ ಉತ್ತರಿಸುತ್ತಾ ತಿಳಿ ಹಾಸ್ಯದ ಮೂಲಕ ತಾವೂ ಸಂಭ್ರಮಿಸುತ್ತಾ, ಮಕ್ಕಳಿಗೂ ಮಾರ್ಗದರ್ಶನ ಮಾಡಿದ ರೀತಿ ಇಂದಿಗೂ ಇಲ್ಲಿ ಮನೆ ಮಾತಾಗಿದೆ. ಆ ಸಭೆಯಲ್ಲೇ ಧ್ರುವನಾರಾಯಣ್ ರವರು ೧ ರಿಂದ ೪ ನೆಯ ತರಗತಿಯವರೆಗೆ ಹೆಚ್ಚುವರಿಯಾಗಿ ಬೇಕೆಂದು ಮನವಿ ಮಾಡಿದರು. ಕೇವಲ ಒಂದು ತಿಂಗಳ ಅವಧಿಯಲ್ಲಿ ಕೇಂದ್ರದಿಂದ ಅನುಮತಿ ಬಂದದ್ದು ಜಿಲ್ಲಾ ಜನರೊಂದಿಗೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿದ್ದ ನನಗೂ ಹೆಮ್ಮೆ ಪಡುವ ವಿಷಯವಾಗಿತ್ತು. ಮತ್ತೆ ಸಿಗುವ ಭರವಸೆ ಇತ್ತು ಅಂದು ಹೊರಟ ಅನಂತಕುಮಾರ್ ಮತ್ತೆ ಬರಲಿಲ್ಲ.

ಇಂದು ಧ್ರುವನಾರಾಯಣರೂ ಇಲ್ಲ. ದೇಶ,ರಾಜ್ಯ ಎಂಬ ವಿಷಯ ಬಂದಾಗಲೆಲ್ಲ ಮುಂದೆ ನಿಂತು ಸಮಸ್ಯೆಗಳನ್ನು ಪರಿಹರಿಸುವ ಶಕ್ತಿಯೊಂದು ಇಲ್ಲವಾಯಿತು ಕರ್ನಾಟಕ ರಾಜ್ಯದ ಶಕ್ತಿಯಾಗಿ, ಎರಡು ದಶಕಗಳ ಕಾಲ ದೆಹಲಿಯಲ್ಲಿ ಸಂಸದರಾಗಿ, ಸಚಿವರಾಗಿ ವಿವಿಧ ಖಾತೆಗಳ ಮಂತ್ರಿಯಾಗಿ, ಸೇವೆ ಸಲ್ಲಿಸಿದ ಅವರ ಅದಮ್ಯ ಚೇತನ ನಮ್ಮೊಂದಿಗಿದೆ, ಮಾರ್ಗದರ್ಶನ ಮಾಡುತ್ತಿದೆ ಎಂಬ ನಂಬಿಕೆ ನನ್ನದು.

ಪುಟ 3 ರಿಂದ

## ಕಾರ್ಯಕರ್ತನ ಮನೆಯ ಬಾಗಿಲಿಗೆ

ಕರಪತ್ರ, ಪೋಸ್ಟರ್ ಗಳನ್ನು ಅಂಟಿಸುವ ಜವಾಬ್ದಾರಿಯೂ ಕಾರ್ಯಕರ್ತರದೇ. ರಾತ್ರಿಯ ಹೊತ್ತಿನಲ್ಲಿ ಸೈಕಲ್ಲೋ ಲೂನಾ, ಸ್ಕೂಟರೋ ಯಾವುದು ಸಿಕ್ಕರೆ ಅದನ್ನು ಹತ್ತಿಕೊಂಡು ಹೊರಡುತ್ತಿದ್ದರು. ಊಟತಿಂಡಿಗೆ ಇಂಥದೇ ಬೇಕೆಂಬ ಹಂಬಲವಾಗಲಿ, ಪರಿವೆಯಾಗಲಿ ಇರುತ್ತಿರಲಿಲ್ಲ. ಹಿರಿಯ ನಾಯಕರಾದ ಕೃಷ್ಣ ಭಟ್ಟರು, ದತ್ತಾತ್ರೇಯ ಹೊಸಬಾಳೆಯವರನ್ನೊಳಗೊಂಡಂತೆ ಎಲ್ಲರೂ ರಸ್ತೆಬದಿಯ ಗಾಡಿಗಳಲ್ಲಿ ಸಿಕ್ಕಿದ್ದನ್ನು ತಿಂದುಕೊಂಡು ಕಾಲದೂಡಿದ್ದುಂಟು. ಆಗ ಮೆಜೆಸ್ಟಿಕ್ ನಲ್ಲಿ ಬಂಡು ಹೋಟೇಲ್ ಎಂಬ ಹೆಸರಿನ ಉಪಾಹಾರಗೃಹವಿತ್ತು. ಆ ಹೋಟೆಲಿನವನು ಕೊಡುವ ಊಟವೋ ಏನೂ ಸಾಲದು. ಅಂತೂ ಅದನ್ನೇ ತಿಂದುಕೊಂಡಿರಬೇಕಾದ ಸ್ಥಿತಿ. ಪಾಪ, ಆ ಗಾಡಿಗಳವರು, ರಾತ್ರಿ ಹೋಟೆಲಿನವರು ಇವರ ಹೊಟ್ಟೆ ತುಂಬಿಸದೇ ಇದ್ದರೂ ಒಳ್ಳೆಯ ಸ್ನೇಹಿತರೇ ಆಗಿದ್ದರು.

ಒಬ್ಬ ನಾಯಕರಾಗಿ ಅನಂತಕುಮಾರ್ ಪ್ರವಾಸ ಕೈಗೊಳ್ಳುತ್ತಿದ್ದ ಬಗೆಯೂ ಅತಿ ವಿಶಿಷ್ಟವಾಗಿರುತ್ತಿತ್ತು. ಸಾಮಾನ್ಯವಾಗಿ ಮುಖಂಡರಾದವರು ಜಿಲ್ಲಾಕೇಂದ್ರಕ್ಕೋ ತಾಲ್ಲೂಕು ಕೇಂದ್ರಕ್ಕೋ ಬಂದು ಅಲ್ಲಿ ವಿದ್ಯಾರ್ಥಿಕಾರ್ಯಕರ್ತರನ್ನು ಭೇಟಿಯಾಗಿ ಮಾತನಾಡಿಸಿ ಕಳುಹಿಸುವಂತೆ ಅನಂತಕುಮಾರ್ ಕೆಲಸಮುಗಿಸಿ ಹೋಗುವವರಲ್ಲ. ಕಾರ್ಯಕರ್ತರು ಎಲ್ಲಿ ಯಾವ ಹಳ್ಳಿಯಲ್ಲಿ ವಾಸವಾಗಿರುತ್ತಾರೋ ಅಲ್ಲಿಗೇ ಸೀದಾ ಹೋಗಿ ಮಾತನಾಡಿಸುವಂಥವರು ಅವರು. ವಿಶ್ವೇಶ್ವರ ಹೆಗಡೆ ಕಾಗೇರಿಯವರು ಆಗ ಉತ್ತರಕನ್ನಡ ಜಿಲ್ಲೆಯ ಪ್ರಮುಖನಾಗಿ ಎರಡು ವರ್ಷ ಕಾರ್ಯನಿರ್ವಹಿಸುತ್ತಿದ್ದ ಕಾಲ. ಉತ್ತರ ಕನ್ನಡ ಜಿಲ್ಲೆಯ ಹುಡುಗರೆಲ್ಲ ಬಹುತೇಕ ಹಳ್ಳಿಯವರು. ಕೆಲಸಕ್ಕೋ ಕಾಲೇಜಿಗೋ ಮಾತ್ರವೇ ಪೇಟೆಯತ್ತ ಸುಳಿಯುವವರು. ಅನಂತಕುಮಾರ್ ಬಂದಾಗಲೆಲ್ಲ ಅವರೊಡನೆ ಹೆಗಡೆಯವರೂ ಜಿಲ್ಲೆಯ ಹಳ್ಳಿಹಳ್ಳಿಗೂ ಹೋಗುತ್ತಿದ್ದರು. ಸಿಕ್ಕಿದ ವಾಹನ ಹತ್ತಿಕೊಂಡೋ ಸೈಕಲ್ಲೋ ಬೈಕೋ ಏರಿಕೊಂಡೋ ಮೂಲೆಮೂಲೆಯ ಹಳ್ಳಿಗೆ ಹೋಗುತ್ತಿದ್ದರು. ಕಾರ್ಯಕರ್ತನಿಗೂ ಆತನ ಮನೆಯವರಿಗೂ ನಮ್ಮನ್ನು ನೋಡಿ ಅಚ್ಚರಿ, ಸಂತೋಷ . ಆ ಕಾರ್ಯಕರ್ತನಿಗೆ ಮುಖಂಡರು ತಾನು ಇರುವಲ್ಲಿಗೇ ಬಂದರಲ್ಲ ಎಂಬ ಸಂತಸವಾದರೆ, ನಮಗೆ ಕಾರ್ಯಕರ್ತನನ್ನು ಕೆಲಸಕ್ಕೆ ತೊಡಗಿಸುವುದರ ಬಗೆಗೆ ಖಚಿತವಾದ ಸ್ಪಷ್ಟತೆ ಲಭ್ಯವಾಗುತ್ತದೆ ಎಂಬುದು ಅನಂತಕುಮಾರರ ಆಲೋಚನೆ. ಮುಖಂಡನೆಂದರೆ ಎಲ್ಲೋ ಕೇಂದ್ರಸ್ಥಾನಕ್ಕೆ ಬಂದು ಅವರಿವರನ್ನು ಮಾತನಾಡಿಸಿ ಬೈಠಕ್ ನಡೆಸಿ ಕೆಲಸ ಮುಗಿಸಿ ಹೊರಟುಬಿಡುವುದಲ್ಲ. ಸಂಘಟನೆಯ ಕಾರ್ಯದಲ್ಲಿ ಕಾರ್ಯಕರ್ತರನ್ನೂ ಆತ್ಮೀಯವಾಗಿ ಒಳಪಡಿಸಿಕೊಳ್ಳಬೇಕೆನ್ನುವ ಕಲೆ ಅನಂತಕುಮಾರರಿಗೆ ಕರಗತವಾಗಿತ್ತು.

ಕಾರ್ಯಕರ್ತರ ವಿಶ್ವಾಸವನ್ನು ಗಳಿಸುವುದಷ್ಟೇ ಅಲ್ಲ, ಅವರ ಮನೆಯ ಸದಸ್ಯರಲ್ಲೇ ಒಬ್ಬರಂತೆ ಆತ್ಮೀಯರಾಗುವ ಕಲೆ ಅವರಿಗೆ ಸಿದ್ಧಿಸಿತ್ತು. ಅದರಲ್ಲೂ ಮನೆಯ ಹಿರಿಯರ ಪ್ರೀತಿವಿಶ್ವಾಸಗಳಿಗೆ ಅವರು ಪಾತ್ರರಾಗುತ್ತಿದ್ದ ಪರಿ ಅನನ್ಯವೇ ಸರಿ. ಕಾಗೇರಿಯವರ ಮನೆಗೆ ಬಂದಾಗಲೆಲ್ಲ ಅವರ ತಂದೆಯವರೊಡನೆ ಕುಳಿತು ಕವಳ ಮೆಲ್ಲುತ್ತ ರಾತ್ರಿ ಒಂದು ಗಂಟೆಯವರೆಗೂ ಅನಂತಕುಮಾರ್ ಹರಟೆ ಹೊಡೆದದ್ದೂ ಹೊಡೆದದ್ದೇ. ವಯಸ್ಸಿನ ಅಂತರ ಅಲ್ಲಿ ಗೋಚರವಾಗುತ್ತಲೇ ಇರಲಿಲ್ಲ. ಅಷ್ಟು ಹೊತ್ತು ಮಾತುಕತೆಗಾದರೂ ವಿಷಯ ಎಲ್ಲಿರುತ್ತಿತ್ತೋ ಏನೋ. ಸಮಾನವಯಸ್ಕರಲ್ಲದವರೊಡನೆಯೂ ಅನಂತಕುಮಾರ್ ಬೆಳೆಸಿಕೊಳ್ಳುತ್ತಿದ್ದ ಸ್ನೇಹ ಅಚ್ಚರಿ ಮೂಡಿಸುವಂಥದ್ದೇ ಸರಿ.

ಆಯಾ ಕಾರ್ಯಕರ್ತರ ಮನೆಯ ಸ್ಥಿತಿಗತಿ, ಅವರ ಸಂಸ್ಕೃತಿ, ಆಚಾರವಿಚಾರಗಳೆಲ್ಲ ಅನಂತಕುಮಾರರಿಗೆ ಅಧ್ಯಯನದ, ಆಸಕ್ತಿಯ ವಸ್ತುವಿಷಯಗಳೂ ಆಗಿರುತ್ತಿದ್ದವು. ಸಮಯಸಂದರ್ಭಗಳಿಗೆ ತಕ್ಕಂತೆ ತಮ್ಮ ತಿಳಿವಳಿಕೆಯನ್ನು ಅವರು ಬಳಸಿಕೊಳ್ಳುವುದಕ್ಕೂ ಅವಕಾಶವಾಗುತ್ತಿತ್ತು. ಹವ್ಯಕರ ಸಮ್ಮೇಳನದಲ್ಲಿ ಅವರು ಅಪ್ಪೆಹುಳಿಯನ್ನು ನೆನಪಿಸಿಕೊಳ್ಳುವವರೇ. ಹೀಗೆ ಹೋದಲ್ಲೆಲ್ಲ ಮೇಲುನೋಟದ ಬಾಯಿಮಾತಿನ ಉಪಚಾರಕ್ಕೆ ಸೀಮಿತವಾಗಿರದೆ, ತಳಮಟ್ಟದವರೆಗೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದುದರಿಂದಲೇ ಎಲ್ಲರಿಗೂ ಅನಂತಕುಮಾರ್ ನಮ್ಮವರು ಎಂಬ ಭಾವನೆ ಮೂಡಲು ಸಾಧ್ಯವಾಯಿತು. ದೇಶದ ಉದ್ದಗಲಗಳಲ್ಲಿ ಅನಂತಕುಮಾರ್ ಎಲ್ಲರ ನಾಯಕರೆನಿಸಿಕೊಂಡದ್ದು ಹೀಗೆಯೇ.

ಚಿಣ್ಣರ ಚೇತನ
ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು
ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

# ಹರಿಯುವ ನೀರಿನಲ್ಲಿ ತೇಲಾಡುವ ಜೇಡಗಳು



ಜೇಡಗಳೆಂದರೆ ಬಲೆ ಕಟ್ಟಿ ಅಲ್ಲೇ ತಟಸ್ಥ ಕೂತಿರುವ ಎಂಟು ಕಾಲಿನ ಜೀವಿಗಳೆಂದು ನಮಗೆ ಗೊತ್ತಿದೆ. ಆದರೆ ಕಳೆದ ತಿಂಗಳು ಕೇರಳದ ದಟ್ಟ ಕಾಡಿನಲ್ಲಿ ಹೊಸಬಗೆಯ ತೇಲುಜೇಡಗಳನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಇವು ಬಲೆ ಕಟ್ಟುವುದಿಲ್ಲ. ಬದಲಿಗೆ ಹರಿಯುವ ನೀರಿನ ಹಳ್ಳದ ಬದಿಯಲ್ಲಿ ಇವು ಕಾದು ಕೂತಿರುತ್ತವೆ. ಅಥವಾ ನೀರಲ್ಲಿ ಎಂಟೂ ಕಾಲೂರಿ ಬೇಟೆ ಹುಡುಕುತ್ತಿರುತ್ತವೆ. ನೀರಲ್ಲಿ ಯಾವುದಾದರೂ ಸೂಕ್ಷ್ಮ ಕೀಟ ತೇಲಿ ಬಂದರೆ ಗಬಕ್ಕನೇ ಹಿಡಿದು ತಿನ್ನುತ್ತವೆ. ಆಗಾಗ ನೀರೊಳಗೆ ಈಜುತ್ತಿರುವ ಚಿಕ್ಕ ಮೀನು ಅಥವಾ ಮೀನಿನ ಮೊಟ್ಟೆಗಳನ್ನೂ ಹಿಡಿದು ಭಕ್ಷಿಸುತ್ತವೆ. ಕೆಲವೊಮ್ಮೆ ಪುಟ್ಟ ಮೀನು ನೀರಿನ ತಳದಲ್ಲಿದ್ದರೆ ಇವು ಡೈವ್ ಹೊಡೆದು, ಅಂದರೆ ನೀರೊಳಕ್ಕೆ ಧುಮುಕಿ ಅದನ್ನು ಹಿಡಿಯುತ್ತವೆ. ಅಪಾಯ ಬಂದರೆ ನೀರಿನಲ್ಲೇ ಕೆಲವು ನಿಮಿಷ ತಟಸ್ಥ ಕೂತಿರುತ್ತವೆ. ಅವು ಮುಳುಗುವುದಿಲ್ಲ. ನೀರಮೇಲೆ ಹೇಗೆ ನಿಂತೇ ಇರುತ್ತವೆ ಎಂಬುದಕ್ಕೆ ಶಿಕ್ಷಕರನ್ನು ಕೇಳಬಹುದು.

ನಮ್ಮ ದೇಶದಲ್ಲಿ ಇಂಥ ಜೇಡವನ್ನು ಇದುವರೆಗೆ ಯಾರೂ ನೋಡಿರಲಿಲ್ಲ. ಯಾರಿಗೂ ಇದು ಕಂಡಿರಲಿಲ್ಲ. ಏಕೆಂದರೆ ಇವುಗಳ ಮೈಬಣ್ಣ ದಟ್ಟ ಕಾಡಿನ ಕಂದು ಹಸುರಿನ ಪಾಚಿಯನ್ನೇ ಹೋಲುತ್ತದೆ. ಇವಕ್ಕೆ ಜುಳುಜುಳು ಹರಿಯುವ ತೀರಾ ಸ್ವಚ್ಛ ನೀರು ಬೇಕು. ದಟ್ಟ ಕಾಡಿನಲ್ಲಿ ಮಾತ್ರ ಅಂಥ ತೊರೆ ಇರುತ್ತವೆ. ಕೇರಳದ ವಯನಾಡಿನ ಅರಣ್ಯದಲ್ಲಿ ಇದು ಪತ್ತೆಯಾಗಿದೆ. ಈ ಜೇಡ ಎಲ್ಲಿದೆಯೋ ಎಂದರೆ ಅಲ್ಲಿನ ಪರಿಸರ ಬಲು ಶುದ್ಧವಾಗಿದೆ ಎಂದು ಅರ್ಥ.

ಎಲ್ಲ ಜೇಡಗಳ ಹಾಗೆ ಇವುಗಳಲ್ಲೂ ಗಂಡಿಗಿಂತ ಹೆಣ್ಣೇ ತುಂಬ ದೊಡ್ಡದಿರುತ್ತದೆ. ಅದರ ಪ್ರತಿ ಕಾಲಿನ ತುದಿಗೂ ಬಿಳಿ ಚುಕ್ಕಿ ಇರುತ್ತದೆ. ಗಂಡು ಜೇಡಗಳಿಗೆ ತಲೆಯಿಂದ ಹಿಡಿದು ಹಿಂತುದಿಯವರೆಗೂ ಬಿಳೀ ಪಟ್ಟೆ ಇರುತ್ತದೆ. ಅಳಿಲುಗಳಿಗೆ ಮೂರು ಬಿಳಿ ಪಟ್ಟೆಗಳಿರುವ ಹಾಗೆ, ಆದರೆ ಈ ಜೇಡನ ಬೆನ್ನಿಗೆ ಒಂದೇ ಪಟ್ಟೆ. ಇಲ್ಲಿ ಕೊಟ್ಟ ಚಿತ್ರದಲ್ಲಿ ಕಾಣುವುದು ಗಂಡೊ ಹೆಣ್ಣೋ ಹೇಳಬಲ್ಲಿರಾ?

ಈ ಅಪರೂಪದ ಜೀವಿಗೆ ಬದುಕಲು ಕಷ್ಟವಾಗುತ್ತಿದೆ. ಏಕೆಂಬುದು ನಿಮಗೆ ಈಗಾಗಲೇ ಗೊತ್ತಾಗಿರಬೇಕು. ಅರಣ್ಯ ಪ್ರದೇಶ, ಶುದ್ಧ ಜುಳುಜುಳು ಹರಿಯುವ ತೊರೆ ಎಲ್ಲವೂ ಅಪರೂಪವಾಗುತ್ತಿದೆ. ದಟ್ಟ ಅರಣ್ಯದಲ್ಲೂ ಬೇಟೆಗೆ, ಮರಗಳ ಕಳ್ಳಸಾಗಣೆಗೆ, ಗಣಿಗಾರಿಕೆಗೆ, ಮರಳು ಬಾಚಲಿಕ್ಕೆ ಅದಕ್ಕೆ ಇದಕ್ಕೆ ಎಂದು ಮನುಷ್ಯರು ನುಗ್ಗುತ್ತಲೇ ಇರುತ್ತಾರೆ. ಈಗೀಗ ಪ್ರವಾಸಿಗಳೂ ವನ್ಯ ಚಾರಣಕ್ಕೆಂದು ಹಳ್ಳಕೊಳ್ಳಗಳನ್ನು ಹೊಕ್ಕುತ್ತಿದ್ದಾರೆ.

ಈಗ ನಿಮಗೊಂದು ರಸಪ್ರಶ್ನೆ: ಅಳಿಲಿನ ಬೆನ್ನಿಗೆ ಹೇಗೆ ಬಿಳಿಪಟ್ಟೆಗಳು ಬಂದವು ಎನ್ನಲು ಹಿಂದಿನವರು ಒಂದು ಚಂದದ ಕತೆ ಕಟ್ಟಿದ್ದಾರೆ. ಈ ಜೇಡನ ಬೆನ್ನಿಗೆ ಒಂದು ಬಿಳಿಪಟ್ಟೆ ಏಕೆ ಬಂತು ಎನ್ನಲು ನೀವು ಹೊಸದೊಂದು ಕತೆ ಕಟ್ಟಬಲ್ಲಿರಾ?

# ಕರ್ನಾಟಕದ ಹೆಮ್ಮೆಯ 'ಗಂಧದ ಚಿರತೆ'



ಈ ವರ್ಷ ಜನವರಿ 5ರಿಂದ ಒಂದಿಡೀ ತಿಂಗಳು ನಮ್ಮ ರಾಜ್ಯದಲ್ಲಿ 'ಹುಲಿಗಣತಿ' ನಡೆಯುತ್ತದೆ. ಅಂದರೆ ನಮ್ಮ ಕಾಡುಗಳಲ್ಲಿ ಎಷ್ಟು ಹುಲಿಗಳು ಇವೆ ಎಂಬುದರ ಲೆಕ್ಕಾಚಾರ ಮಾಡುವ ಅವಧಿ. ಅದಕ್ಕೆಂದು ಅರಣ್ಯದ ಕಾವಲು ಸಿಬ್ಬಂದಿ, ಬೆಂಗಳೂರಿನ ಅಧಿಕಾರಿಗಳು ಮತ್ತು ಕೆಲವು ಉತ್ಸಾಹಿ ಯುವಕ ಯುವತಿಯರು ಅರಣ್ಯಗಳಿಗೆ ಹೋಗಿ ಹುಲಿಗಳ ಸಂಖ್ಯೆಯ ಅಂದಾಜು ಲೆಕ್ಕ ಹಾಕುತ್ತಾರೆ. ಅಲ್ಲಲ್ಲಿ ಕ್ಯಾಮರಾ ಇಟ್ಟು, ಅಥವಾ ಕೆಸರು ನೆಲದಲ್ಲಿ ಹುಲಿಗಳ ಹೆಜ್ಜೆ ಗುರುತಿಸಿ ಅಥವಾ ಅವು ಅಲ್ಲಲ್ಲಿ ಬಿಟ್ಟು ಹೋದ ಚಿಹ್ನೆಗಳ ಲೆಕ್ಕ ಹಾಕುತ್ತಾರೆ. ನಿಮಗಿದು ಗೊತ್ತಿರಬಹುದು ಹುಲಿಗಳ ಸಂಖ್ಯೆಯಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನದಲ್ಲಿದ್ದರೆ (785) ನಮ್ಮದು ಎರಡನೆಯ ಸ್ಥಾನ (563). ಅದು ನಾಲ್ಕು ವರ್ಷಗಳ ಹಿಂದಿನ ಲೆಕ್ಕಾಚಾರ. ಈಗ ಸರಿಯಾದ ಲೆಕ್ಕ ಸಿಕ್ಕರೆ ನಮ್ಮ ಹುಲಿಗಳೇ ಮೊದಲ ಸ್ಥಾನಕ್ಕೆ ಏರಬಹುದು. ನಮ್ಮ ರಾಜ್ಯದಲ್ಲಿರುವ ಎಲ್ಲ ಐದೂ ಹುಲಿ ಸಂರಕ್ಷಣಾ ಧಾಮಗಳ ಹೆಸರು ಗೊತ್ತಿವೆಯೆ? ಜಾಸ್ತಿ ಹುಲಿಗಳಿರುವ ಸಂರಕ್ಷಿತ ಅರಣ್ಯ ಎಂದರೆ ನಾಗರಹೊಳೆ ಮತ್ತು ಬಂಡೀಪುರ. ಅವೆರಡನ್ನು ಬಿಟ್ಟರೆ ಭದ್ರಾ ಅಭಯಾರಣ್ಯ, ಕಾಳಿ ವನ್ಯಧಾಮ ಮತ್ತು ಬಿಳಿಗಿರಿರಂಗನ ಬೆಟ್ಟದಲ್ಲೂ ಹುಲಿಗಳು ನಿರ್ಭಯವಾಗಿ ಜೀವಿಸಬಹುದು. ಈಚೆಗೆ ಮಲೆಮಹದೇಶ್ವರ ಬೆಟ್ಟದ ಸುತ್ತಲಿನ ಅರಣ್ಯವನ್ನೂ ಹುಲಿಧಾಮವೆಂದು ಘೋಷಿಸಬೇಕೆಂದು ವನ್ಯಪ್ರೇಮಿಗಳು ಒತ್ತಾಯಿಸುತ್ತಿದ್ದಾರೆ. ಹುಲಿಗಳು ಆರಾಮಾಗಿ ಬದುಕಿರಬೇಕೆಂದರೆ ಅಲ್ಲಿ ಅವುಗಳ ಬೇಟೆಗೆ ಬೇಕಾದ ಜಿಂಕೆ, ಕಾಟಿ, ಕಾಡುಹಂದಿ ಇತ್ಯಾದಿ ಪ್ರಾಣಿಗಳೂ ಇರಬೇಕಾಗುತ್ತದೆ. ಈ ಶಾಖಾಹಾರಿ ಪ್ರಾಣಿಗಳಿಗಾಗಿ ಸಾಕಷ್ಟು ಹುಲ್ಲುಮೇವು ಕೂಡ ಇರಬೇಕು. ಅಂದರೆ ಅಲ್ಲಿ ಸದಾ ಹರಿಯುವ ನದಿ ತೊರೆಗಳೂ ಇರಬೇಕು. ನಮ್ಮ ರಾಜ್ಯದ ಎಲ್ಲೆಲ್ಲಿ ಹುಲಿ ಸಂರಕ್ಷಣಾ ಅರಣ್ಯಗಳಿವೆ ಎಂಬುದನ್ನು ನಕಾಶೆಯಲ್ಲಿ ಗುರುತಿಸಬಲ್ಲಿರಾ?



ಅದಿರಲಿ, ಈಚೆಗೆ ಗಂಧದ ಬಣ್ಣದ ಚಿರತೆಯೊಂದು ವಿಜಯನಗರ ಜಿಲ್ಲೆಯ ಕುರುಬು ಕಾಡಿನಲ್ಲಿ ಪತ್ತೆಯಾಗಿದೆ ಗೊತ್ತೆ? ಚಿರತೆಗಳು ಸಾಮಾನ್ಯವಾಗಿ ಓಡಾಡುವ ಜಾಗದ ಬಳಿ ಆಟೊಮ್ಯಾಟಿಕ್ ಕ್ಯಾಮರಾವನ್ನು ಕಟ್ಟಿರುತ್ತಾರೆ. ಅದರ ಎದುರು ಯಾವ ಪ್ರಾಣಿ ಬಂದರೂ ಕ್ಯಾಮರಾ ತಂತಾನೇ ಕ್ಲಿಕ್ ಆಗುತ್ತದೆ. ಹೀಗೆ ಇಟ್ಟ ಕ್ಯಾಮರಾದಲ್ಲಿ ಒಂದು ಅಪರೂಪದ ಚಿರತೆಯ ಚಿತ್ರವೂ ಇತ್ತು. ಅದಕ್ಕೆ ಮಾಮೂಲು ಚಿರತೆಗಳಿಗೆ ಇರುವಂತೆ ಅಚ್ಚಕಪ್ಪು ಮತ್ತು ಕೆಂಪಿಟ್ಟಿಗೆ ಬಣ್ಣದ ಚುಕ್ಕಿಗಳು ಇರಲಿಲ್ಲ. ಬದಲಿಗೆ ಗಂಧದ ಬೂದು ಬಣ್ಣದ ಚುಕ್ಕಿಗಳಿದ್ದವು. ಇದು ತೀರಾ ತೀರಾ ವಿಶೇಷ ಸಂಗತಿ ಏಕೆಂದರೆ ಇಂಥ ಬಣ್ಣದ ಚಿರತೆಗಳು ಜಗತ್ತಿನ ಬೇರೆಲ್ಲೂ ಪತ್ತೆಯಾಗಿಲ್ಲ.

# ವಿಕಸಿತ ಭಾರತ ಆಂದೋಲನವು "ಹಸಿರು ಭಾರತ"ಆಗಲಿ



ಭಾರತದ ಅತ್ಯಂತ ಪುರಾತನ ಹಾಗೂ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಹೌರಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸೈನ್ಸ್ ಆಂಡ್ ಟೆಕ್ನಾಲಜಿ (IIEST) ಶಿಬಪುರದ 12ನೇ ಘಟಿಕೋತ್ಸವವು ಡಿಸೆಂಬರ್ 19 2025 ರಂದು ಯಶಸ್ವಿಯಾಗಿ ಜರುಗಿತು. ದೇಶದ ತಾಂತ್ರಿಕ ನಕ್ಷೆಯಲ್ಲಿ ತನ್ನದೇ ಆದ ವಿಶೇಷ ಸ್ಥಾನ ಹೊಂದಿರುವ ಈ ಸಂಸ್ಥೆಯ ಘಟಿಕೋತ್ಸವದಲ್ಲಿ ಈ ಬಾರಿ ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ ಮತ್ತು ದೇಶಪ್ರೇಮದ ವಿಚಾರಗಳು ದಿಕ್ಸೂಚಿಯಾದವು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ 'ಅದಮ್ಯ ಚೇತನ' ಸಂಸ್ಥೆಯ ಮುಖ್ಯಸ್ಥರು ಹಾಗೂ ಐಐಇಎಸ್‌ಟಿ ಆಡಳಿತ ಮಂಡಳಿಯ ಅಧ್ಯಕ್ಷರೂ ಆದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು, ನವ ಪದವೀಧರರಿಗೆ ವಿಕಸಿತ ಭಾರತದ ಗುರಿಯನ್ನು ತಲುಪಲು 'ಹಸಿರು ಭಾರತ'ದ ಹಾದಿಯನ್ನು ಅನುಸರಿಸುವಂತೆ ಕರೆ ನೀಡಿದರು. ವಿಜ್ಞಾನ ಮತ್ತು ತಂತ್ರಜ್ಞಾನದ ಪದವಿಗಳು ಕೇವಲ ಒಂದು ಹಂತವಷ್ಟೇ. ಯುವಜನತೆ ತಮ್ಮಲ್ಲಿರುವ ದೃಢ ವಿಶ್ವಾಸ, ಮಾನವೀಯ ಮೌಲ್ಯ ಹಾಗೂ ಸಾಹಸ ಮನೋಭಾವವನ್ನು ಬಳಸಿಕೊಂಡು ಭಾರತವನ್ನು ಸಮೃದ್ಧಿಯ ಶಿಖರಕ್ಕೇರಿಸಲು ಪಣತೊಡಬೇಕು ಎಂದು ಅವರು ಆಶಿಸಿದರು.

**ಪರಿಸರ ಕಾಳಜಿ ಮತ್ತು ತ್ಯಾಜ್ಯ ನಿರ್ವಹಣೆ:**

ಇಂದಿನ ಆಧುನಿಕ ಯುಗದ ಬಹುದೊಡ್ಡ ಸವಾಲಾದ ಪ್ಲಾಸ್ಟಿಕ್ ತ್ಯಾಜ್ಯದ ಬಗ್ಗೆ ಮಾತನಾಡುತ್ತಾ, ಸುಸ್ಥಿರತೆಯು ದೊಡ್ಡ ಯೋಜನೆಗಳಿಂದ ಮಾತ್ರವಲ್ಲದೆ ನಮ್ಮ ದೈನಂದಿನ ಸಣ್ಣಪುಟ್ಟ ಚಟುವಟಿಕೆಗಳಿಂದಲೇ ಆರಂಭವಾಗುತ್ತದೆ ಎಂದು ಅವರು ಪ್ರತಿಪಾದಿಸಿದರು. ನಾವು ಬಳಸುವ ಪ್ಲಾಸ್ಟಿಕ್ ಪ್ಯಾಕೆಟ್‌ಗಳನ್ನು ಕತ್ತರಿಸುವ ವಿಧಾನವು ಪರಿಸರದ ಮೇಲೆ ಬೀರುವ ಪರಿಣಾಮವನ್ನು ವಿವರಿಸಿದ ಅವರು, ಇಂತಹ ಸಣ್ಣ ವಿಷಯಗಳಲ್ಲೂ ಜಾಗೃತಿ ವಹಿಸುವುದು ತ್ಯಾಜ್ಯ ನಿರ್ವಹಣೆಯನ್ನು ಸುಗಮಗೊಳಿಸುತ್ತದೆ ಎಂದರು. ಪರಿಸರಸ್ನೇಹಿ ಸಾಮಗ್ರಿಗಳ ಬಳಕೆಯನ್ನು ಹೆಚ್ಚಿಸುವ ಮೂಲಕ ಮನುಕುಲ ಮಾತ್ರವಲ್ಲದೆ, ಪ್ರಾಣಿ-ಪಕ್ಷಿ ಸಂಕುಲದ ಅಸ್ತಿತ್ವಕ್ಕೂ ಪೂರಕವಾದ ವಾತಾವರಣವನ್ನು ನಿರ್ಮಿಸಲು ಇಂಜಿನಿಯರ್‌ಗಳು ಶ್ರಮಿಸಬೇಕೆಂದು ತಿಳಿಸಿದರು.
ಭಾರತವು ಮುಂದಿನ ದಿನಗಳಲ್ಲಿ ಕೇವಲ ಉತ್ಪನ್ನಗಳ ತಯಾರಿಕಾ ಕೇಂದ್ರವಾಗದೆ, 'ಹಿಂಸಾಮುಕ್ತ, ರಾಸಾಯನಿಕಮುಕ್ತ ಮತ್ತು ಪರಿಸರ ಸ್ನೇಹಿ' ಉತ್ಪನ್ನಗಳ ಜಾಗತಿಕ ಕಾರ್ಖಾನೆಯಾಗಿ ಹೊರಹೊಮ್ಮಬೇಕು ಎಂದರು. ಈ ಗುರಿಯನ್ನು ಸಾಧಿಸುವಲ್ಲಿ ತಾಂತ್ರಿಕ ಪದವೀಧರರ ಪಾತ್ರ ದೊಡ್ಡದಿದೆ ಎಂದು ಅವರು ನೆನಪಿಸಿದರು.

**ಸಂಸ್ಥೆಯ ಹಿರಿಮೆ ಮತ್ತು ಸಾಧನೆ:**

ಈ ಹಿಂದೆ ಬಿ.ಇ. ಕಾಲೇಜು ಎಂದು ಪ್ರಖ್ಯಾತವಾಗಿದ್ದ ಐಐಇಎಸ್‌ಟಿ ಶಿಬಪುರವು ಕಳೆದ 170 ವರ್ಷಗಳಿಂದ ರಾಷ್ಟ್ರಕ್ಕೆ ಶ್ರೇಷ್ಠ ತಂತ್ರಜ್ಞರನ್ನು ಕೊಡುಗೆಯಾಗಿ ನೀಡುತ್ತಾ ಬಂದಿದೆ. ಇದು ಕೇವಲ ಒಂದು ಶಿಕ್ಷಣ ಸಂಸ್ಥೆಯಲ್ಲ, ಬದಲಾಗಿ ರಾಷ್ಟ್ರದ ಆಸ್ತಿಯಾಗಿದೆ ಎಂದು ಬಣ್ಣಿಸಿದ ಅವರು, ಸಂಸ್ಥೆಯ ಇತ್ತೀಚಿನ ಮಹತ್ವದ ಸಾಧನೆಗಳನ್ನು ಸ್ಮರಿಸಿದರು. ಭಾರತದಲ್ಲಿ ತಯಾರಾದ 33 ಸೆಮಿಕಂಡಕ್ಟರ್ ಚಿಪ್‌ಗಳಲ್ಲಿ ಒಂದಾದ 'ಅನಲಾಗ್ ಕಂಪೇರೇಟರ್ C2S0007' ಈ ಸಂಸ್ಥೆಯಲ್ಲಿಯೇ ರೂಪಿತವಾಗಿರುವುದು ಅತ್ಯಂತ ಹೆಮ್ಮೆಯ ವಿಷಯ ಎಂದರು. ಅಲ್ಲದೆ, ಬೆಂಗಳೂರಿನ ಐಐಎಸ್‌ಸಿ (IISc) ಸಹಭಾಗಿತ್ವದಲ್ಲಿ 200 ಕೋಟಿ ರೂ. ಯೋಜನಾ ವೆಚ್ಚದ ಸಂಶೋಧನೆಗಾಗಿ ಸಂಸ್ಥೆಯ ಆಯ್ಕೆಯಾಗಿರುವುದು ಮತ್ತು ಪ್ರಧಾನ ಮಂತ್ರಿಗಳ ಪ್ರಾಧ್ಯಾಪಕತ್ವ ಕಾರ್ಯಕ್ರಮಕ್ಕೆ ಅನುಮೋದನೆ ದೊರೆತಿರುವುದು ಸಂಸ್ಥೆಯ ಶೈಕ್ಷಣಿಕ ಘನತೆಗೆ ಸಾಕ್ಷಿಯಾಗಿದೆ ಎಂದರು.

ಬಂಕಿಮಚಂದ್ರ ಚಟ್ಟೋಪಾಧ್ಯಾಯರ 'ವಂದೇ ಮಾತರಂ' ಗೀತೆಯ 150ನೇ ವರ್ಷದ ಈ ಸಂದರ್ಭದಲ್ಲಿ, "ಸುಜಲಾಂ ಸುಫಲಾಂ ಸಸ್ಯ ಶಾಮಲಾಂ " ಎಂಬ ಕನಸನ್ನು ನನಸು ಮಾಡಲು ಸಮೃದ್ಧ ಭಾರತದ ನಿರ್ಮಾಣವಾಗಬೇಕಿದೆ. ತೈತ್ತಿರೀಯ ಉಪನಿಷತ್ತಿನ "ಸ್ವಾಧ್ಯಾಯನ್ಮಾ ಪ್ರಮದಃ" ಎಂಬ ಸಂದೇಶದಂತೆ ವಿದ್ಯಾರ್ಥಿಗಳು ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಸಮಾಜದ ಹಿತದೃಷ್ಟಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ಹೇಳಿದರು.




ಈ ಸ್ಮರಣೀಯ ಘಟಿಕೋತ್ಸವದಲ್ಲಿ ಒಟ್ಟು 959 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ವಿಜ್ಞಾನಿ ಹಾಗೂ ನೀತಿ ಆಯೋಗದ ಸದಸ್ಯ ಡಾ. ವಿ.ಕೆ. ಸಾರಸ್ವತ್, ಸಂಸ್ಥೆಯ ನಿರ್ದೇಶಕ ಪ್ರೊ. ವಿ.ಎಂ.ಎಸ್.ಆರ್. ಮೂರ್ತಿ ಮತ್ತು ರಿಜಿಸ್ಟ್ರಾರ್ ಬಿಶ್ವಜಿತ್ ಅವರು ಉಪಸ್ಥಿತರಿದ್ದು, ಪದವಿ ಪಡೆದ ಯುವ ಪ್ರತಿಭೆಗಳನ್ನು ಶುಭ ಹಾರೈಸಿದರು.

ಪುಟ 1 ರಿಂದ

## ಹೊಸ ವರ್ಷಕ್ಕೆ 'ಅದಮ್ಯ' ಸಂಕಲ್ಪ:

ಇದೇ ಸಂದರ್ಭದಲ್ಲಿ ಅದಮ್ಯ ಚೇತನದ 522ನೇ 'ಹಸಿರು ಭಾನುವಾರ'ದ ಪರಿಕ್ರಮ ನಡೆದಿದ್ದು, ಹಾಗೂ ಹಸಿರು ಸೇನಾನಿಗಳನ್ನು ಗೌರವಿಸಲಾಯಿತು. ಅಲ್ಲದೆ, ಸ್ವಚ್ಛತಾ ಕಾರ್ಮಿಕ ಮಹಿಳೆಯರಿಗೆ ಸ್ಟೀಲ್ ಊಟದ ಡಬ್ಬಿ, ಸ್ಟೀಲ್ ಬಾಟಲ್ ಮತ್ತು ಬಟ್ಟೆಯ ಚೀಲಗಳನ್ನು ವಿತರಿಸಲಾಯಿತು.

ವಂದೇ ಮಾತರಂ ಗಾಯನವನ್ನು ಪದ್ಮಿನಿ ಓಕ್ ಮತ್ತು ಸಂಗೀತಾ ಕಟ್ಟಿ ಅವರ ತಂಡದವರು ಪ್ರಸ್ತುತಪಡಿಸಿದರು. ವೇದಿಕೆಯಲ್ಲಿನ ಗಣ್ಯರು ಹಾಗೂ ಸಭಿಕರು ಈ ಗಾಯನಕ್ಕೆ ದನಿಗೂಡಿಸಿದರು. ಕಾರ್ಯಕ್ರಮದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ.ವಿ. ಕೃಷ್ಣ ಭಟ್ ಮತ್ತು ಶಾಸಕ ಉದಯ್ ಗರುಡಾಚಾರ್ ಹಾಗೂ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಶ್ರೀ ಅನಂತಕುಮಾರ್ ಅವರು ಬೆಳಗಿಸಿದ ಅಖಂಡ ವಂದೇ ಮಾತರಂ ಎಂಬ ದೇಶಪ್ರೇಮದ ಜ್ಯೋತಿಯು, ಕೇವಲ ಒಂದು ಗಾಯನವಾಗಿ ಉಳಿಯದೆ, ಇಂದಿನ ಯುವ ಪೀಳಿಗೆಯನ್ನು ರಾಷ್ಟ್ರ ನಿರ್ಮಾಣ ಮತ್ತು ಪರಿಸರ ಸಂರಕ್ಷಣೆಯತ್ತ ಮುನ್ನಡೆಸುವ ದಿಕ್ಸೂಚಿಯಾಯಿತು.

# ಸಾಮ್ರಾಟ್ ಮಿಹಿರ ಭೋಜ

ವ್ಯಕ್ತಿ ವಿಶೇಷ ಮಾಲಿಕೆ

ಭಾರತದ ಇತಿಹಾಸದ ಪುಟಗಳಲ್ಲಿ ಅನೇಕ ರಾಜರು ತಮ್ಮ ಅಪ್ರತಿಮ ಶೌರ್ಯ, ರಾಜಕೀಯ ಮುತ್ಸದ್ದಿತನ ಮತ್ತು ಸಾಮ್ರಾಜ್ಯ ನಿರ್ಮಾಣದ ಕೌಶಲದಿಂದ ಅಜರಾಮರರಾಗಿದ್ದಾರೆ. ಅಂತಹ ಮಹಾನ್ ಚೇತನಗಳಲ್ಲಿ ಗುರ್ಜರ-ಪ್ರತಿಹಾರ ವಂಶದ ಚಕ್ರವರ್ತಿ ಮಿಹಿರ ಭೋಜ (ಸುಮಾರು ಕ್ರಿ.ಶ. 836–885) ಅಗ್ರಗಣ್ಯ. ಕ್ಷೀಣಿಸುತ್ತಿದ್ದ ಸಾಮ್ರಾಜ್ಯಕ್ಕೆ ನವಚೈತನ್ಯ ತುಂಬಿ, ಉತ್ತರ ಭಾರತದಲ್ಲಿ ಅದನ್ನು ಅತ್ಯಂತ ಪ್ರಬಲ ಶಕ್ತಿಯನ್ನಾಗಿ ರೂಪಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಶಕ್ತಿಶಾಲಿ ಆಡಳಿತ, ದೀರ್ಘಕಾಲೀನ ಸ್ಥಿರತೆ ಮತ್ತು ಸಾಂಸ್ಕೃತಿಕ ಪುನರುಜ್ಜೀವನವನ್ನು ಏಕಕಾಲದಲ್ಲಿ ಸಾಧಿಸಿದ್ದು ಇವನ ಹೆಗ್ಗಳಿಕೆ.



ಕನೌಜ್ ನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಮಿಹಿರ ಭೋಜ, ಅಲ್ಲಿಂದ ಒಂದು ಬೃಹತ್ ಸಾಮ್ರಾಜ್ಯವನ್ನು ಮುನ್ನಡೆಸಿದನು. ಪಶ್ಚಿಮದಲ್ಲಿ ಪಂಜಾಬ್ ಮತ್ತು ರಾಜಸ್ಥಾನದಿಂದ ಹಿಡಿದು, ಪೂರ್ವದಲ್ಲಿ ಬಂಗಾಳದ ಗಡಿಯವರೆಗೂ ಹಾಗೂ ಮಧ್ಯ ಭಾರತದ ವಿಶಾಲ ಪ್ರದೇಶಗಳಲ್ಲಿ ಅವನ ವಿಜಯಪತಾಕೆ ಹಾರಾಡುತ್ತಿತ್ತು. ಈ ಸಾಮ್ರಾಜ್ಯ ವಿಸ್ತರಣೆಯು ಕೇವಲ ಖಡ್ಗಬಲದ ಸಾಧನೆಯಾಗಿರದೆ, ಸುಭದ್ರ ಆಡಳಿತ ವ್ಯವಸ್ಥೆ ಮತ್ತು ಪ್ರಜಾಹಿತದ ದೂರದೃಷ್ಟಿಯ ಫಲವಾಗಿತ್ತು.

ಮಿಹಿರ ಭೋಜನ ಆಳ್ವಿಕೆಯ ಅತ್ಯಂತ ಮಹತ್ವದ ಸಾಧನೆಯೆಂದರೆ ಗಡಿ ರಕ್ಷಣೆ. ಆ ಕಾಲದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಅರಬ್ ಆಕ್ರಮಣಗಳನ್ನು ಭಾರತದ ಪಶ್ಚಿಮ ಗಡಿಗಳಲ್ಲಿಯೇ ತಡೆದು ನಿಲ್ಲಿಸುವಲ್ಲಿ ಪ್ರತಿಹಾರರ ಪಾತ್ರ ನಿರ್ಣಾಯಕವಾಗಿತ್ತು. ವಿದೇಶಿ ದಾಳಿಗಳಿಂದ ದೇಶವನ್ನು ರಕ್ಷಿಸುವ ಮೂಲಕ ಭಾರತದ ಒಳಭಾಗದಲ್ಲಿ ಶಾಂತಿ ನೆಲೆಸುವಂತೆ ಮಾಡಿದನು. ಸುಲೈಮಾನ್ ಸೇರಿದಂತೆ ಅನೇಕ ವಿದೇಶಿ ಪ್ರವಾಸಿಗರು ಇವನ ಆಡಳಿತವನ್ನು "ಅತ್ಯಂತ ಶಾಂತ, ಸುರಕ್ಷಿತ ಮತ್ತು ಸಮೃದ್ಧ" ಎಂದು ಬಣ್ಣಿಸಿರುವುದು ಇವನ ಭದ್ರತಾ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.



ವೈಯಕ್ತಿಕವಾಗಿ ವಿಷ್ಣುವಿನ ಪರಮ ಭಕ್ತನಾಗಿದ್ದ ಮಿಹಿರ ಭೋಜ, 'ಆದಿ ವರಾಹ' ರೂಪವನ್ನು ತನ್ನ ರಾಜ ಲಾಂಛನವನ್ನಾಗಿ ಸ್ವೀಕರಿಸಿದ್ದನು. ಅವನ ಕಾಲದ ನಾಣ್ಯಗಳ ಮೇಲೆ ಕಂಡುಬರುವ ವರಾಹನ ಚಿಹ್ನೆಯು, ಅವನ ಆಡಳಿತವು "ಧರ್ಮ ಸಂರಕ್ಷಣೆ"ಯ ಸಂಕಲ್ಪವನ್ನು ಹೊಂದಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಕೃಷಿ, ವ್ಯಾಪಾರ ಮತ್ತು ನಗರೀಕರಣಕ್ಕೆ ಅವನು ನೀಡಿದ ಉತ್ತೇಜನವು ಆರ್ಥಿಕ ಸ್ಥಿರತೆಗೆ ಭದ್ರ ಬುನಾದಿ ಹಾಕಿತು.

ಯೋಧನ ಶೌರ್ಯ ಮತ್ತು ಮೌಲ್ಯಾಧಾರಿತ ಆಡಳಿತದ ಸಮ್ಮಿಲನವಾಗಿದ್ದ ಮಿಹಿರ ಭೋಜ, ಇಂದಿನ ಕಾಲಘಟ್ಟಕ್ಕೂ ಪ್ರಸ್ತುತ. ರಾಷ್ಟ್ರಭದ್ರತೆ, ಸಾಂಸ್ಕೃತಿಕ ಆತ್ಮಗೌರವ ಮತ್ತು ಬಲಿಷ್ಠ ಕೇಂದ್ರೀಕೃತ ಆಡಳಿತದ ಬಗ್ಗೆ ಚರ್ಚಿಸುವಾಗ, ಮಿಹಿರ ಭೋಜನ ಆಡಳಿತ ಮಾದರಿಯು ದಾರಿದೀಪವಾಗಿದೆ. ಅವನು ಕೇವಲ ಪ್ರತಿಹಾರ ವಂಶದ ಶ್ರೇಷ್ಠ ರಾಜನಷ್ಟೇ ಅಲ್ಲ; ಉತ್ತರ ಭಾರತದ ರಾಜಕೀಯ ಏಕತೆಯ ಹರಿಕಾರ ಮತ್ತು ಭಾರತೀಯ ಸಂಸ್ಕೃತಿಯ ರಕ್ಷಕನಾಗಿ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾನೆ.

## ಸತತ 525 ವಾರಗಳಿಂದ ನಿರಂತರ ಪರಿಸರ ಸೇವೆ: ಅದಮ್ಯ ಚೇತನದ ಹಸಿರು ಪಯಣ ಯಶಸ್ವಿ



ಹಸಿರು ಕ್ರಾಂತಿಯ ಹರಿಕಾರ ಶ್ರೀ ಅನಂತಕುಮಾರ್ ಅವರು ಪ್ರಕೃತಿಯ ಸಂರಕ್ಷಣೆಗಾಗಿ ದೂರದೃಷ್ಟಿಯಿಂದ ಆರಂಭಿಸಿದ 'ಹಸಿರು ಭಾನುವಾರ' ಪ್ರಕಲ್ಪವು ಇಂದು ಸತತ 525 ವಾರಗಳನ್ನು ಪೂರೈಸಿ ಪರಿಸರ ಕಾಳಜಿಯ ಹೊಸ ಮೈಲಿಗಲ್ಲನ್ನು ತಲುಪಿದೆ. ಶ್ರೀ ಅನಂತಕುಮಾರ್ ಅವರ ಆಶಯದಂತೆ 'ಕನಿಷ್ಠ ಒಬ್ಬರಿಗೆ ಒಂದು ಮರ' ಎಂಬ ಸಂಕಲ್ಪದೊಂದಿಗೆ ಆರಂಭವಾದ ಈ ಅಭಿಯಾನವನ್ನು ಅದಮ್ಯ ಚೇತನ ಸಂಸ್ಥೆಯು ಕಳೆದ 525 ವಾರಗಳಿಂದ ಒಂದು ಭಾನುವಾರವನ್ನೂ ಬಿಡದೆ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ.

ಹತ್ತು ವರ್ಷಗಳ ಸುದೀರ್ಘ ಪಯಣವನ್ನು ಯಶಸ್ವಿಯಾಗಿ ಪೂರೈಸಿರುವ ಈ ಅಭಿಯಾನದಲ್ಲಿ ಭಾಗಿಯಾದ ಪ್ರತಿಯೊಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ, ಪರಿಸರ ರಕ್ಷಣೆಯ ಹಾದಿಯಲ್ಲಿ ಮತ್ತಷ್ಟು ಹೊಸ ಮೈಲಿಗಲ್ಲುಗಳನ್ನು ಸೃಷ್ಟಿಸಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದೆ. ಈ ತಿಂಗಳ ಹಸಿರು ಭಾನುವಾರದ ಅಭಿಯಾನದಡಿ 522 ರಿಂದ 525ನೇ ವಾರದವರೆಗಿನ ಕಾರ್ಯಕ್ರಮಗಳು ಬೆಂಗಳೂರಿನ ವಿವಿಧೆಡೆ ಅತ್ಯಂತ ಯಶಸ್ವಿಯಾಗಿ ಜರುಗಿದವು. 522, 523, 524 ಮತ್ತು 525ನೇ ಹಸಿರು ಭಾನುವಾರಗಳನ್ನು ಕ್ರಮವಾಗಿ ವಾಜರಹಳ್ಳಿಯ BCCHS ಲೇಔಟ್, ಬಿ.ಪಿ. ವಾಡಿಯಾ ರಸ್ತೆಯ ಅನಂತವನದ ಆವರಣ, ಕಗ್ಗಲಿಪುರದ ಉತ್ತರಿ ಶಂಕರ ಮಠದ ಆವರಣ ಹಾಗೂ ಬೇಗೂರಿನ ಸರ್ಕಾರಿ ಶಾಲೆಯ ಆವರಣದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮಗಳಲ್ಲಿ ಬಿ.ಎಂ.ಎಸ್ ಕಾಲೇಜು ವಿದ್ಯಾರ್ಥಿಗಳು, ಯುತ್ ಫಾರ್ ಸೇವಾ ಸಂಸ್ಥೆಯ ಕಾರ್ಯಕರ್ತರು, ಹಸಿರು ಯೋಧರು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದ್ದರು.

## ತಿಂಗಳ ವರದಿ
### ( ಡಿಸೆಂಬರ್ -ಜನವರಿ) 2026

# “ಯುವ ರಾಯಭಾರಿ” ಎರಡನೇ ಹಂತದ ಶಿಬಿರ ಸಂಪನ್ನ




ಅನಂತಕುಮಾರ ಪ್ರತಿಷ್ಠಾನದ ಸಮಾಜಮುಖಿ ದೂರದೃಷ್ಟಿಯ ಯೋಜನೆ “ಯುವ ರಾಯಭಾರಿ” ಯೋಜನೆಯ ಎರಡನೇ ಹಂತದ ಶಿಬಿರವು ಬೆಂಗಳೂರಿನ ಬಸವನಗುಡಿಯ ಅನಂತವನ ಮತ್ತು ಕೆಪಿಎಸ್ ಶಾಲೆಯ ಆವರಣದಲ್ಲಿ ಜನವರಿ 10 ಮತ್ತು 17ರಂದು ಎರಡು ಹಂತಗಳಲ್ಲಿ ಈ ಶಿಬಿರವನ್ನು ಆಯೋಜಿಸಲಾಗಿತ್ತು.” ಈ ಎರಡೂ ಹಂತದ ಶಿಬಿರಗಳು ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ ಮತ್ತು ಶಿಬಿರದ ಸಂಚಾಲಕಿ ಶ್ರೀಮತಿ ಮೋಹಿನಿ ಆಚಾರ್ಯ ಅವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಜರುಗಿದವು.

ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮೊದಲ ಬಾರಿಗೆ ‘ಅನಂತವನ’ಕ್ಕೆ ಭೇಟಿ ನೀಡಿದಾಗ, ನಗರದ ಮಧ್ಯದಲ್ಲಿ ಸೃಷ್ಟಿಯಾಗಿರುವ ಈ ಅದ್ಭುತ ಹಸಿರು ತಾಣವನ್ನು ಕಂಡು ಬೆರಗಾದರು. ಮುಂದಿನ ಪೀಳಿಗೆಗೆ ನಮ್ಮ ಪರಂಪರೆಯನ್ನು ಪರಿಚಯಿಸುವಂತಹ ಔಷಧೀಯ ಮತ್ತು ಅಪರೂಪದ ವೃಕ್ಷಗಳು ಅಲ್ಲಿ ಮೈದುಂಬಿ ನಿಂತಿದ್ದವು. ಕನ್ನಡದ ಕೀರ್ತಿಯನ್ನು ಸಾರುವ 20 ಅಡಿ ಎತ್ತರದ ಕದಂಬ ವೃಕ್ಷ, ಪಾವಿತ್ರ್ಯತೆಯ ರುದ್ರಾಕ್ಷಿ ಹಾಗೂ ಸೀತಾ ಅಶೋಕ ಮರಗಳನ್ನು ಮಕ್ಕಳು ಹತ್ತಿರದಿಂದ ಕಂಡು ಪರಿಚಯ ಮಾಡಿಕೊಂಡರು.

ನಂತರ ಮಕ್ಕಳಿಗೆ ಶಾಲಾ ಅಂಗಳದಲ್ಲಿ ಮರಗಳ ನೆರಳಿನಲ್ಲಿ ಶಿಬಿರ ನಡೆಸಲಾಯಿತು. ಇದು ನಮ್ಮ ಪ್ರಾಚೀನ ಭೋದನಾ ರೀತಿಯನ್ನು ನೆನಪಿಸುತ್ತಿತ್ತು. “ಯುವ ರಾಯಭಾರಿ” ಕಾರ್ಯಕ್ರಮದ ಆಶಯ ಮತ್ತು ವಂದೇ ಮಾತರಂ ಗೀತೆ ರಚನೆಯ ಹಿನ್ನೆಲೆ ಮತ್ತು ಅದರ ಮಹತ್ವವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ ಅವರು ವಿವರಿಸಿದರು.

ಈ ಬಾರಿಯ ಶಿಬಿರದ ಪ್ರಮುಖ ವಿಷಯ ‘ಕಾಗದದ ಕಪ್ ಬಳಕೆ ಏಕೆ ಅಪಾಯಕಾರಿ?’ ಎಂಬುದಾಗಿತ್ತು. ಈ ಕುರಿತು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಐಐಟಿ ಖರಗ್‌ಪುರದ ಸಂಶೋಧನೆಯನ್ನು ಉಲ್ಲೇಖಿಸಿ ಎಚ್ಚರಿಸಿದರು. “ಒಂದು ಕಾಗದದ ಕಪ್‌ನಲ್ಲಿ ಬಿಸಿ ಪಾನೀಯವನ್ನು ಕೇವಲ 15 ನಿಮಿಷಗಳ ಕಾಲ ಇಟ್ಟರೆ, ಅದು ಸುಮಾರು 25,000 ಮೈಕ್ರೋಪ್ಲಾಸ್ಟಿಕ್ ಕಣಗಳನ್ನು ಬಿಡುಗಡೆ ಮಾಡುತ್ತದೆ. ನಮ್ಮ ದೇಶದಲ್ಲಿ ವಾರ್ಷಿಕವಾಗಿ 2,500 ಕೋಟಿ ಕಪ್‌ಗಳನ್ನು ಬಳಸಲಾಗುತ್ತಿದೆ. ಇವುಗಳ ಒಳಭಾಗದಲ್ಲಿ ಸಣ್ಣ ಪ್ಲಾಸ್ಟಿಕ್ ಲೇಪನವಿರುವುದರಿಂದ ಇವು ಮರುಬಳಕೆಗೂ ಯೋಗ್ಯವಲ್ಲ. ಅಲ್ಲದೆ, ಇವುಗಳ ನಿರಂತರ ಬಳಕೆಯು ಕ್ಯಾನ್ಸರ್, ಥೈರಾಯ್ಡ್‌ನಂತಹ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಲ್ಲದು,” ಎಂದು ಅವರು ವಿವರವಾಗಿ ತಿಳಿಸಿದರು.

ನಂತರ ಮಕ್ಕಳೊಂದಿಗೆ ನಡೆದ ಸಂವಾದ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಶ್ರೀಮತಿ ಮೋಹಿನಿ ಆಚಾರ್ಯ ಅವರು ‘ಗ್ರೀನ್‌ವಾಶಿಂಗ್’ (Greenwashing) ಅಂದರೆ ‘ಪರಿಸರ ಕಾಳಜಿಯ ಸೋಗು’ ಹಾಕುವ ತಂತ್ರದ ಬಗ್ಗೆ ಅರಿವು ಮೂಡಿಸಿದರು. ಕಂಪನಿಗಳು ತಾವು ಪರಿಸರವನ್ನು ರಕ್ಷಿಸುತ್ತಿದ್ದೇವೆ ಎಂದು ನಂಬಿಸಿ, ವಾಸ್ತವದಲ್ಲಿ ಹಾನಿ ಉಂಟುಮಾಡುವ ಅಥವಾ ಉತ್ಪನ್ನದ ನೈಜತೆಯನ್ನು ಮುಚ್ಚಿಡುವ ಬಗೆಯನ್ನು ಅವರು ವಿವರಿಸಿದರು. ಇದಕ್ಕೆ ಪೂರಕವಾಗಿ, ಮೇಲ್ನೋಟಕ್ಕೆ ಪರಿಸರ ಸ್ನೇಹಿಯಂತೆ ಕಾಣುವ ಕಾಗದದ ಕಪ್‌ಗಳು ವಾಸ್ತವದಲ್ಲಿ ಪ್ಲಾಸ್ಟಿಕ್‌ಗಿಂತಲೂ ಹೇಗೆ ಹೆಚ್ಚು ಅಪಾಯಕಾರಿ ಎಂಬುದನ್ನು ಉದಾಹರಣೆಯಾಗಿ ನೀಡಿ, ಮಕ್ಕಳಿಗೆ ವಿಷಯವನ್ನು ಸರಳವಾಗಿ ಮನವರಿಕೆ ಮಾಡಿಕೊಟ್ಟರು. ಮಕ್ಕಳು ಹಿಂದಿನ ಶಿಬಿರದಲ್ಲಿ ಉಂಟಾದ ಬದಲಾವಣೆಗಳನ್ನು, ಅವರು ತಮ್ಮ ಮನೆ, ಶಾಲೆ, ಇತರ ಪರಿಸರದಲ್ಲಿ ಕೈಗೊಂಡ ಕ್ರಮಗಳನ್ನು ತಿಳಿದು ಉತ್ತೇಜನ ನೀಡಿದರು. ಕೊನೆಯಲ್ಲಿ “ವಂದೇ ಮಾತರಂ” ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

## ಅದಮ್ಯ ಚೇತನಕ್ಕೆ ಬಂದ 50,000 ತಟ್ಟೆಗಳು



ಪ್ರಯಾಗ್‌ರಾಜ್‌ನಲ್ಲಿ ನಡೆದ ‘ಸ್ವಚ್ಛ ಕುಂಭಮೇಳ’ಕ್ಕಾಗಿ ದಾನಿಗಳು ನೀಡಿದ್ದ ಹೆಚ್ಚುವರಿ ತಟ್ಟೆಗಳನ್ನು ಆರ್‌ಎಸ್‌ಎಸ್ ಪದಾಧಿಕಾರಿಗಳು ‘ಅದಮ್ಯ ಚೇತನ’ ಸಂಸ್ಥೆಗೆ ಹಸ್ತಾಂತರಿಸಿದ್ದಾರೆ. ಇದರಿಂದಾಗಿ ಸುಮಾರು 50,000 ಸ್ಟೀಲ್ ತಟ್ಟೆಗಳು ಸಂಸ್ಥೆಗೆ ಲಭ್ಯವಾಗಿದ್ದು, ಸಂಸ್ಥೆಯ ಮಹತ್ವಾಕಾಂಕ್ಷೆಯ ‘ಕಸರಹಿತ ಕಾರ್ಯಕ್ರಮ’ದ (Zero Garbage Event) ಆಯೋಜನೆಗೆ ಆನೆಬಲ ಬಂದಂತಾಗಿದೆ. ಈ ತಟ್ಟೆಗಳು ವಿಶೇಷವಾಗಿ ಬಫೆ ಊಟದ ವ್ಯವಸ್ಥೆಗೆ ಅತ್ಯಂತ ಸೂಕ್ತವಾಗಿವೆ. ನಿಂತುಕೊಂಡು ಕೈಯಲ್ಲಿ ಹಿಡಿದು ಊಟ ಮಾಡುವಾಗ ಪದಾರ್ಥಗಳು ಚೆಲ್ಲದಂತೆ ಹಾಗೂ ತಟ್ಟೆಯಲ್ಲಿರುವ ಪದಾರ್ಥಗಳು ಒಂದಕ್ಕೊಂದು ಸೇರದಂತೆ ಇವು ಅನುಕೂಲಕರವಾಗಿವೆ.

ಸಂಸ್ಥೆಯು ‘ಅನಂತ ಪ್ಲೇಟ್ ಬ್ಯಾಂಕ್’ ಯೋಜನೆಯ ಮೂಲಕ ಈಗಾಗಲೇ 33 ಕೇಂದ್ರಗಳಿಂದ ಸಾರ್ವಜನಿಕ ಸಮಾರಂಭಗಳಿಗೆ ಉಚಿತವಾಗಿ ಸ್ಟೀಲ್ ತಟ್ಟೆ ಹಾಗೂ ಲೋಟಗಳನ್ನು ನೀಡುತ್ತಿದೆ. ಈ ಮೂಲಕ ತ್ಯಾಜ್ಯ ರಹಿತ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿದೆ. ಇದೀಗ ಕುಂಭಮೇಳಕ್ಕಾಗಿ ದಾನಿಗಳಿಂದ ಸಂಗ್ರಹವಾಗಿದ್ದ ತಟ್ಟೆಗಳು ಈ ಅಭಿಯಾನಕ್ಕೆ ಮತ್ತಷ್ಟು ವೇಗ ನೀಡಿವೆ. ಈ ತಟ್ಟೆಗಳನ್ನು ಕೇವಲ ಬೆಂಗಳೂರಿನ ಕೇಂದ್ರಗಳಿಗೆ ಸೀಮಿತಗೊಳಿಸದೆ, ಕೊಪ್ಪಳ ಜಿಲ್ಲೆಯ ಗಂಗಾವತಿ ಹಾಗೂ ಮಹಾರಾಷ್ಟ್ರದ ಸಾಂಗ್ಲಿಗೂ ಕಳುಹಿಸಿಕೊಡಲಾಗಿದೆ. ಅಲ್ಲದೆ, ವಿವಿಧೆಡೆ ಉದ್ಘಾಟನೆಗೊಳ್ಳಲಿರುವ ಹೊಸ ಕೇಂದ್ರಗಳಿಗೂ ಈ ತಟ್ಟೆಗಳನ್ನು ಕಳುಹಿಸುವ ಮೂಲಕ ಪ್ಲೇಟ್ ಬ್ಯಾಂಕ್ ಸೇವೆಯನ್ನು ವಿಸ್ತರಿಸಲಾಗುತ್ತಿದೆ.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ, ಶ್ರೀಚೇತನ ಸಭೆ, 33 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರಗಳಿಂದ ಉಚಿತ ಭೋಜನ ವಿತರಣೆ ಆದಿಯಾಗಿ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

ಅನಂತಪಥ
Published by: Tejaswini Ananthkumar
Inputs : Nagesh Hegade | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಚಿಣ್ಣರ ಚೇತನ

## ಫೆಬ್ರುವರಿ 2: ಜಾಗತಿಕ ಕೆರೆ-ತೊರೆಗಳ ದಿನ:

ಜಗತ್ತಿನ ಎಲ್ಲ ಸುಧಾರಿತ ದೇಶಗಳಲ್ಲಿ ಫೆಬ್ರುವರಿ 2ರಂದು ಶಾಲಾ ಮಕ್ಕಳು ತಮ್ಮ ಊರಿನ ಕೆರೆ, ಹಳ್ಳ ಅಥವಾ ನದಿತೀರಕ್ಕೆ ಹೋಗುತ್ತಾರೆ. ತಮ್ಮ ಕೈಯಲ್ಲಿ ದುರ್ಬೀನ್ ಅಥವಾ ಭೂತಗನ್ನಡಿ, ಕ್ಯಾಮರಾ ಮತ್ತು ನೋಟ್‌ಬುಕ್ ಹಿಡಿದಿರುತ್ತಾರೆ. ಕೆಲವರು ನೀರಿನ ಗುಣಮಟ್ಟ ಪರೀಕ್ಷೆಗೆ ಬೇಕಾದ ದ್ರಾವಣವನ್ನೂ, ಲಿಟ್ಮಸ್ ಕಾಗದ ಮತ್ತು ಸೋಸು ಕಾಗದವನ್ನೂ ಒಯ್ದಿರುತ್ತಾರೆ. ಒಂದಿಷ್ಟು ಮಕ್ಕಳು ನೀರಲ್ಲಿರುವ ಜಲಚರಗಳನ್ನು, ಇನ್ನು ಕೆಲವರು ಅಲ್ಲಿಗೆ ಬಂದ ಪಕ್ಷಿಗಳನ್ನು ಗುರುತಿಸುತ್ತಾರೆ. ಎಷ್ಟು ಸಾಧ್ಯವೊ ಅಷ್ಟು ಬಗೆಯ ಜೀವಿಗಳ ಹೆಸರುಗಳನ್ನು ಬರೆದುಕೊಳ್ಳುತ್ತಾರೆ.

ನೀರಿನ ದಡದಲ್ಲಿ ಎಂತೆಂಥ ಸಸ್ಯಗಳು, ಔಷಧ ಮೂಲಿಕೆಗಳು ಇವೆ ಎಂದು ಪಟ್ಟಿ ಮಾಡುತ್ತಾರೆ. ನೀರು ಎಷ್ಟು ಪಾರಕ ಇದೆ (ಅಂದರೆ ಎಷ್ಟು ತಿಳಿಯಾಗಿದೆ) ಎಂದು ಪರೀಕ್ಷೆ ಮಾಡುತ್ತಾರೆ. ಮನುಷ್ಯರು ಆ ನೀರನ್ನು ಹೇಗೆ ಹೇಗೆ ಬಳಸಿಕೊಳ್ಳುತ್ತಾರೆ ಅಥವಾ ಕೊಳಕು ಮಾಡಿ ಬಿಸಾಕುತ್ತಾರೆ ಎಂಬುದನ್ನೂ ಪತ್ತೆ ಹಚ್ಚುತ್ತಾರೆ. ನೀರು ಕೊಳೆಯಾಗಿದ್ದರೆ ಯಾರಿಗೆ ದೂರು ಕೊಡಬೇಕು ಎಂಬುದನ್ನು ಗುರುತಿಸಿ, ಅವರಿಗೆ ಪತ್ರ ಬರೆಯುವುದನ್ನೂ ಕಲಿಯುತ್ತಾರೆ. ಕಳೆದ ವರ್ಷ ಇದೇ ದಿನ ಇಲ್ಲಿಗೆ ಬಂದ ವಿದ್ಯಾರ್ಥಿಗಳು ಬರೆದಿಟ್ಟ ವರದಿಗಳನ್ನು ಹೋಲಿಸಿ ನೋಡುತ್ತಾರೆ.






ಕೆರೆ, ತೊರೆ ಇರುವ ಸ್ಥಳಗಳನ್ನು'ಜೌಗು ಭೂಮಿ' ಅಥವಾ 'ತರಿ ಭೂಮಿ' ಎಂತಲೂ ಇಂಗ್ಲಿಷ್‌ನಲ್ಲಿ 'ವೆಟ್ ಲ್ಯಾಂಡ್ ಎಂತಲೂ ಹೇಳುತ್ತಾರೆ. ಇವು ಬಹಳಷ್ಟು ಜೀವಿಗಳಿಗೆ ಬದುಕುವ ಆವಾಸಗಳಾಗಿರುತ್ತವೆ. ಅಲ್ಲಿಗೆ ಚರಂಡಿ ಅಥವಾ ಕಾರ್ಖಾನೆಗಳ ಕೊಳೆನೀರು ಬರಬಾರದು. ಅಲ್ಲಿ ಟ್ರ್ಯಾಕ್ಟರ್, ಬೈಕು, ಲಾರಿಗಳನ್ನೂ ಅಥವಾ ಎಮ್ಮೆ ದನಗಳನ್ನೂ ಬಟ್ಟೆಬರೆಗಳನ್ನೂ ತೊಳೆಯಲು ಬಿಡಬಾರದು. ಅಲ್ಲಿ ಮೀನು, ಏಡಿ, ಕಪ್ಪೆ, ಆಮೆ, ಜಿಗಣೆ, ನೀರೊಳ್ಳೆ ಹಾವು ಎಲ್ಲ ಇರಬೇಕು. ಅವುಗಳ ಬೇಟೆಗೆ ಪಕ್ಷಿಗಳು ಬರುತ್ತಿರಬೇಕು. ಆ ನೀರಿನ ತಡಿಯಲ್ಲಿ ಬಹುಮೂಲ್ಯ ಗಿಡಮೂಲಿಕೆಗಳು ಬೆಳೆದಿರಬೇಕು. ಒಟ್ಟಾರೆ ಅದೊಂದು ಜೀವಕಾಶಿ ಆಗಿರಬೇಕು. ಆಗ ಮಾತ್ರ ಅದೊಂದು ಆರೋಗ್ಯಪೂರ್ಣ ಪರಿಸರ ಎನಿಸುತ್ತದೆ. ನಮ್ಮ ದೇಹಕ್ಕೆ ಆರೋಗ್ಯ ಎಷ್ಟು ಮುಖ್ಯವೊ ಪ್ರಕೃತಿಯ ಆರೋಗ್ಯಕ್ಕೆ ಜಲಮೂಲಗಳು ಅಷ್ಟೇ ಮುಖ್ಯ. ಅವು ಶುದ್ಧವಾಗಿರಬೇಕು.

ಅಂಥ ಜಲಮೂಲಗಳಿಗೆ ಹೋದ ಶಾಲಾ ಮಕ್ಕಳಲ್ಲಿ ಕೆಲವರು ಅದರ ಬಗ್ಗೆ ಕವನ ಬರೆಯಬಹುದು, ಕೆಲವರು ಚಿತ್ರ ಬರೆಯಬಹುದು; ಮತ್ತೆ ಕೆಲವರು ಶಾಲೆಯಲ್ಲಿ ಪ್ರಬಂಧವನ್ನೂ ರಂಗೋಲಿಯನ್ನೂ ಬರೆಯಬಹುದು. ಎಲ್ಲರಿಗೂ ಕೇಳುವಂತೆ ಪುಟ್ಟ ಭಾಷಣವನ್ನೂ ಮಾಡಬಹುದು. ಚರ್ಚಾಕೂಟದಲ್ಲಿ ಭಾಗವಹಿಸಬಹುದು. ಇವೆಲ್ಲವೂ ಮಕ್ಕಳ ಪ್ರತಿಭೆಯನ್ನು ಅರಳಿಸುವ, ನಿಸರ್ಗಪ್ರೀತಿಯನ್ನು ಬೆಳೆಸುವ ಕ್ರಿಯೆಗಳಾಗಿರುತ್ತವೆ.

# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಬಿಕೆ ಮರಿಯಪ್ಪ ವಿದ್ಯಾರ್ಥಿನಿ ನಿಲಯದ ಬೆಳ್ಳಿ ಹಬ್ಬದ ಸಂಭ್ರಮ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್  ಮುಖ್ಯ ಅತಿಥಿಯಾಗಿ ಭಾಗವಹಿಸಿದರು .



ಕಲಾನಿಕೇತನ ವೇದಿಕೆ, ಪಬ್ಲಿಕ್ ಕ್ಲಬ್ ಗಂಗಾವತಿ, ಹಾಗೂ  ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ 2026 ರ ಜನವರಿ 15 ರಂದು  ಗಂಗಾವತಿಯಲ್ಲಿ ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆಗೊಂಡಿತು.



ಅದಮ್ಯ ಚೇತನದ 'ಹಸಿರು ಭಾನುವಾರ' ಕಾರ್ಯಕ್ರಮವು 10 ವರ್ಷಗಳನ್ನು ಪೂರೈಸಿ, 525ನೇ ವಾರವನ್ನು ತಲುಪಿದೆ. ಈ ಪ್ರಯುಕ್ತ, ಹಸಿರು ಕಾರ್ಯದಲ್ಲಿ ನಿರಂತರವಾಗಿ ಭಾಗಿಯಾದ ಹಸಿರು ಸೇನಾನಿಗಳನ್ನು ಜನವರಿ 1ರಂದು ಗೌರವಿಸಲಾಯಿತು.



ಜ.17ರ 'ಯುವ ರಾಯಭಾರಿ' ಕಾರ್ಯಕ್ರಮದಲ್ಲಿ, ಅದಮ್ಯ ಚೇತನದ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ 'ನಮ್ಮ ಬಾಟಲಿ ನಾವೇ ಒಯ್ಯೋಣ' ಅಭಿಯಾನದಡಿ ಮಕ್ಕಳಿಗೆ ಸ್ಟೀಲ್ ಬಾಟಲಿ ವಿತರಿಸಿದರು.



ಇತ್ತೀಚೆಗೆ ಉಡುಪಿಯ ಶಾಸಕರಾದ ಶ್ರೀ ಯಶ್‌ಪಾಲ್ ಸುವರ್ಣ ಅವರು ಬೆಂಗಳೂರಿನ 'ಅನ್ನಪೂರ್ಣ' ಅಡುಗೆ ಮನೆ ಮತ್ತು 'ಅನಂತ ಪ್ರೇರಣಾ ಕೇಂದ್ರ'ಕ್ಕೆ ಭೇಟಿ ನೀಡಿ, ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ದಿನಾಂಕ 10-01-2026 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಸಿಟಿ ಪ್ರಾಥಮಿಕ ಶಾಲೆಯ 95 ಮಕ್ಕಳು ಭೇಟಿ ನೀಡಿದರು.



ಪರಿಸರ ಸಂರಕ್ಷಣೆಯನ್ನೇ ಜೀವಾಳವಾಗಿಸಿಕೊಂಡು ಶ್ರಮಿಸುತ್ತಿರುವ ಅದಮ್ಯ ಚೇತನ ಸಂಸ್ಥೆಯು 'ಹಸಿರು ಭಾನುವಾರ'ದ 523ನೇ ಕಾರ್ಯಕ್ರಮವನ್ನು ಬಿಪಿ ವಾಡಿಯಾ ರಸ್ತೆಯ ಅನಂತವನದ ಆವರಣದಲ್ಲಿ ಡಿಸೆಂಬರ್ 14 ರಂದು ಯಶಸ್ವಿಯಾಗಿ ನಡೆಯಿತು.




ಬೆಂಗಳೂರಿನ ಅನ್ನಪೂರ್ಣ ಅಡುಗೆ ಮನೆಯ ಆವರಣದಲ್ಲಿ ಅದಮ್ಯ ಚೇತನ ಸಂಸ್ಥೆಯಿಂದ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.